
ಕಣವಿ ಕಾವ್ಯ ಸಂಪುಟ ೧೫

ಬರೆದು ತೀರದ ಬದುಕು

ಚೆನ್ನವೀರ ಕಣವಿ



ಬರೆದು ತೀರದ ಬದುಕು

ಚೆನ್ನವೀರ ಕಣವಿ

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
ಗೋಕುಲಂ ಮೂರನೆಯ ಹಂತ, ಮೈಸೂರು - ೨

BAREDU THEEREDA BADUKU
A Collection of poems

Written by
Chennaveera Kanavi

Published by
Talukina Venkaniah Smaraka Granthamale
9, Ramya, Gokulam 3rd stage
Mysore - 570 002

Pages : 84 *Price : Rs. 40/-*

First Impression : 2000
Second Impression : 2009

Cover Page : Sudakar Darbe

D.T.P. : **LEKHA GRAPHICS**
Mysore -8 Ph: 2482854

Printing : Good Touch Printers, Mysore



ಅರ್ಪಣೆ

ಕಲಾಕ್ಷೇತ್ರದಲ್ಲಿ ಹಾಗೂ ಬರವಣಿಗೆಯಲ್ಲಿ
ಬಹುಮುಖ ಪ್ರತಿಭೆಯನ್ನು ಮೆರೆದು
ಅಕಾಲದಲ್ಲಿ ನಮ್ಮನ್ನಗಲಿದ
ನನ್ನ ಪ್ರೀತಿಯ ಸೋದರಳಿಯ
ಶಂಕರ ಪಾಟೀಲನ
ನೆನಪಿಗೆ

ಅರಿಕೆ

ಇದು ನನ್ನ ಹದಿನಾಲ್ಕನೆಯ ಕವನ ಸಂಗ್ರಹ. ಕಳೆದ ಐದಾರು ವರ್ಷಗಳ ನನ್ನ ಈ ಕಾವ್ಯದ ಬೆಳಸನ್ನು ಸಹೃದಯರು ಎಂದಿನಂತೆ ಪ್ರೀತಿಯಿಂದ ಬರಮಾಡಿಕೊಳ್ಳುತ್ತಾರೆಂದು ಆಶಿಸಿದ್ದೇನೆ.

ಕೆಲ ವರ್ಷಗಳ ಹಿಂದೆ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಏರ್ಪಟ್ಟ ಕನ್ನಡ -ತಮಿಳು ಕಾವ್ಯ ಕಮ್ಮಟದಲ್ಲಿ ತಮಿಳು ಕವಿಗಳ ಜೊತೆಗೆ ಕುಳಿತು, ಪರಸ್ಪರ ವಿಚಾರ ವಿನಿಮಯದೊಂದಿಗೆ ಅನುವಾದಿಸಿದ ಕೆಲವು ಕವಿತೆಗಳನ್ನು ಈ ಸಂಗ್ರಹದ ಕೊನೆಯಲ್ಲಿ ಕೊಡಲಾಗಿದೆ.

ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಮೌಲಿಕ ಗ್ರಂಥಗಳ ಪ್ರಕಟಣೆಯ ಮೂಲಕ ಸಾಹಿತ್ಯದ ಸಂಪತ್ತನ್ನು ಹೆಚ್ಚಿಸಿದ ಪ್ರಮುಖ ಪ್ರಕಾಶನ ಸಂಸ್ಥೆಗಳಲ್ಲಿ ಒಂದಾದ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ತನ್ನ ಚಿನ್ನದ ಹಬ್ಬವನ್ನು ಆಚರಿಸುತ್ತಿರುವುದು ಕನ್ನಡಿಗರಿಗೆಲ್ಲ ಹೆಮ್ಮೆಯ ಸಂಗತಿ ಯಾಗಿದೆ. ಈ ಸಂದರ್ಭದಲ್ಲಿ ಈ ಮಾಲೆಯಲ್ಲಿ ಬೆಳಕು ಕಾಣುತ್ತಿರುವ ಪ್ರಥಮ ಕಂತಿನ ಹನ್ನೆರಡು ಪುಸ್ತಕಗಳಲ್ಲಿ ನನ್ನ ಪ್ರಸ್ತುತ ಕವನ ಸಂಗ್ರಹವೂ ಒಂದಾಗಿರುವುದು ನನಗೆ ಹೆಚ್ಚಿನ ಸಂತೋಷವನ್ನುಂಟುಮಾಡಿದೆ. ಇದೇ ಗ್ರಂಥಮಾಲೆಯಲ್ಲಿ ಈ ಮೊದಲು ನನ್ನ 'ಕಾವ್ಯಾನುಸಂಧಾನ' (೧೯೭೧) ಹಾಗೂ 'ನಗರದಲ್ಲಿ ನೆರಳು' (೧೯೭೪) ಎಂಬ ಎರಡು ಕೃತಿಗಳ ಪ್ರಕಾಶನಕ್ಕೆ ಕಾರಣರಾದ ಹಿರಿಯರಾದ ದಿವಂಗತ ತ.ಸು. ಶಾಮರಾಯರನ್ನು ಇಲ್ಲಿ ಕೃತಜ್ಞತಾ ಪೂರ್ವಕ ನೆನೆದುಕೊಳ್ಳುತ್ತೇನೆ.

ಶ್ರೀ ಟಿ.ಎಸ್. ಛಾಯಾಪತಿಯವರು ಈ ದಿಸೆಯಲ್ಲಿ ತಮ್ಮ ತಂದೆಯವರ ಧ್ಯೇಯವನ್ನು ಅದೇ ಅರ್ಪಣಾಮನೋಭಾವದಿಂದ ಯಶಸ್ವಿಯಾಗಿ ಈಡೇರಿಸಿಕೊಂಡು ಬಂದು ಕನ್ನಡದ ಶ್ರೇಷ್ಠ ಪ್ರಕಾಶಕರಲ್ಲಿ ಒಬ್ಬರೆಂದು ಪ್ರಶಂಸೆಗೆ ಪಾತ್ರರಾಗಿರುವುದು ನಿಜಕ್ಕೂ ಅಭಿನಂದನೀಯ. ಸದಭಿರುಚಿಯ ಈ ಉನ್ನತ ಮಟ್ಟವನ್ನು ಶ್ರೀ ಛಾಯಾಪತಿಯವರು ಮುಂದೆಯೂ ಕಾಯ್ದು

ಕೊಂಡು ಹೋಗುವರೆಂಬ ಭರವಸೆಯಿಂದ ಅವರಿಗೆ ಎಲ್ಲ ಬಗೆಯ ಶುಭವನ್ನು ಕೋರುತ್ತೇನೆ.

ಈ ಪುಸ್ತಕವನ್ನು ಚಿತ್ತಾಕರ್ಷಕವಾಗಿ ಮುದ್ರಿಸಿಕೊಟ್ಟ ಕಮಲ್ ಇಂಪ್ರೆಷನ್ಸ್ ಅವರಿಗೂ ಮತ್ತು ಈ ಕೃತಿಯ ರಕ್ಷಾಪುಟದ ವಿನ್ಯಾಸವನ್ನು ಸುಂದರವಾಗಿ ಸಿದ್ಧಪಡಿಸಿದ ಕಲಾವಿದ ಶ್ರೀ ಸುಧಾಕರ ದರ್ಬೆಯವರಿಗೂ ನನ್ನ ವಂದನೆಗಳು.

ಚೆನ್ನವೀರ ಕಣವಿ

ಧಾರವಾಡ

೧೦-೬-೨೦೦೦

ಕೃತಜ್ಞತೆಯ ನುಡಿ

ಹಿರಿಯರಾದ ಶ್ರೀ ತ.ಸು. ಶಾಮರಾಯರು ಪ್ರಾರಂಭಿಸಿದ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯನ್ನು ಅವರ ಪುತ್ರ ಶ್ರೀ ಟಿ.ಎಸ್. ಛಾಯಾಪತಿಯವರು ಕಳೆದ ನಾಲ್ಕು ದಶಕಗಳಿಂದ ಯಶಸ್ವಿಯಾಗಿ ಮುಂದು ವರಿಸಿಕೊಂಡು ಬಂದು ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸುವುದಲ್ಲದೆ 'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ' (೧೯೯೯) ಯನ್ನು ಪಡೆದ ಶ್ರೇಯಸ್ಸಿಗೂ ಪಾತ್ರರಾಗಿದ್ದಾರೆ. ಈ ಗ್ರಂಥ ಮಾಲೆಯಲ್ಲಿ ನನ್ನ ನಾಲ್ಕು ಪುಸ್ತಕಗಳು ಅಚ್ಚು ಕಟ್ಟಾಗಿ ಪ್ರಕಟಗೊಂಡಿರುವುದನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸಿಕೊಳ್ಳು ತ್ತೇನೆ.


ನನ್ನ 'ಸಮಗ್ರ ಕಾವ್ಯದ' ಮೂರು ಆವೃತ್ತಿಗಳು ಪ್ರಕಟಗೊಂಡಿದ್ದರೂ ವಿದ್ಯಾರ್ಥಿಗಳ ಹಾಗೂ ಸಾಮಾನ್ಯ ಓದುಗರ ದೃಷ್ಟಿಯಿಂದ ಬಿಡಿಕವನ ಸಂಗ್ರಹಗಳ ಪ್ರತಿಗಳೂ ಅವರಿಗೆ ಲಭ್ಯ ವಾಗುವದು ಪ್ರಯೋಜನಕರವೆಂದು ಭಾವಿಸಿ, ಸ್ವತಃ ಲೇಖಕರೂ ಆಗಿರುವ ಪ್ರಕಾಶಕ ಛಾಯಾಪತಿಯವರು ಪ್ರಸ್ತುತ ಮಾಲೆಯನ್ನು ಪ್ರಾರಂಭಿಸಿದ್ದಾರೆ. ಅದಕ್ಕೆ ತಕ್ಕ ರಕ್ಷಾಪುಟದ ವಿನ್ಯಾಸವನ್ನು ಸುಂದರವಾಗಿ ರಚಿಸಿಕೊಟ್ಟ ಖ್ಯಾತ ಕಲಾವಿದ ಶ್ರೀ ಸುಧಾಕರ ದರ್ಭೆಯ ವರಿಗೂ ಈ ಯೋಜನೆಯ ಮುಖ್ಯ ಪ್ರೇರಕರಾದ ಶ್ರೀಛಾಯಾಪತಿಯವರಿಗೂ ನನ್ನ ವಂದನೆಗಳು.

ಧಾರವಾಡ
೧೦ - ೯ - ೨೦೦೯

ಚೆನ್ನವೀರ ಕಣವಿ

ಪರಿವಿಡಿ

ಅನುವಾದಗಳು



೧೯೯೪ ರಲ್ಲಿ ಕವಿ ಕಣವಿಯವರು

(ಭಾವಚಿತ್ರ : ಶ್ರೀ ಎ.ಎನ್. ಮುಕುಂದ, ಬೆಂಗಳೂರು)

ನನ್ನವೇ ನಾಲ್ಕು ಶಬ್ದ

ಇಷ್ಟೊಂದು ಸದ್ದುಗದ್ದಲದಲ್ಲಿ ಒದ್ದಾಡು-
ತಿರುವಾಗ ಎಲ್ಲಡಗಿ ಮುದ್ದೆಯಾಗಿರಬಹುದು
ನನ್ನವೇ ನಾಲ್ಕು ಶಬ್ದಗಳು? ಕೋಶಗಳನೊಡೆದು
ಹೊಸ ದೇಸಿಯಲಿ ಬಣ್ಣ ಬಣ್ಣದ ರೆಕ್ಕೆ ಪಡೆದು
ಹೊರಟಿದ್ದ ಸ್ಥಾಯಿ - ಸಂಚಾರಿಗಳು? ಎಲ್ಲ ಬಗೆ
ಹೂವುಗಳ ಸಖ್ಯದಲಿ ನೋವು-ನಲಿವಿನ ಗಾಳಿ-
ಹಾವು ಹರಿದಾಡದಿಹ ಜಾಗವೆಲ್ಲಿದೆ ಹೇಳಿ-
ಬೀಸಿ ಪರಿಶುದ್ಧಗೊಳಿಸುವ ಪರಿಮಳದ ಪರಿಗೆ.

ರಸ್ತೆ ಹಿಡಿಸಲಾರದೆ ಬಿಡುವಿಲ್ಲದೋಡಾಡು-
ತಿರುವ ಕುರುಡು ಚಕ್ರದ ನಡುವೆ ಸಿಕ್ಕ ಬೆಕ್ಕಿನ
ಮರಿಯನೆತ್ತಿ ತರಹೋದ ಕವನವೆ ಜೋಪಾನ:
ಹದ್ದು ಹಾರಾಡುವಾಕಾಶದೆಡೆಗೂ ನೋಡು.
ಮೋಡ ಮಳೆಗರೆಯಲಿ, ಆಮೇಲೆ ಬರಲಿ ಸೂರ್ಯ
ಈಗ ಪದಪಂಕ್ತಿಯಲಿ ಬೀಜ ಬಿತ್ತುವ ಕಾರ್ಯ.

ಕಾಣದ ಬೇರು

ಹಲವು ದಿಕ್ಕಿನ ಹಕ್ಕಿ - ಪಕ್ಕಿ ತನ್ನೆಡೆ ಸೆಳೆವ
'ಕುಲರಸಿಕ; ನಿಂತಲ್ಲೆ ನಿಂತು ಹತ್ತೂ ಕಡೆಗೆ
ಕೈಚಾಚಿ, ಬಾಚಿ ತಬ್ಬುವನಾಥ ಬಂಧುವಿಗೆ
ನೆಲವೆ ನೆಲಗಟ್ಟು; ಸುರಿಮಳೆಗೆ ಹಿಗ್ಗಿ ಮೈತೊಳೆವ.
ಬಿರುಗಾಳಿ ಬೀಸಿ ದಿಕ್ಕೆಡಿಸಿದರು, ಪಕ್ಕದಲಿ
ಬಾಗಿ, ಯಥಾಸ್ಥಿತಿಯ ಕಾದುಕೊಳ್ಳುವ ಸಾಧು.
ಬಳಲಿದವರಿಗೆ ನೆಳಲು, ಸಹಿಸಿ ಮಾಗಿಯ ಮಂಜು
ಚೈತ್ರಕ್ಕೆ ಜೀವನೋತ್ಸಾಹ ಋತುಚಕ್ರದಲಿ.
ಬಟ್ಟಬಯಲಲಿ ತೊಟ್ಟು ಕಳಚಿ ಬೀಳುವವರೆಗೆ
ಹುಟ್ಟುಗುಣ, ತನ್ನಿಷ್ಟಸಾಧನೆಗೆ ಹೋರಾಡಿ
ಹರಿದುಕೊಳ್ಳುವದೆಲ್ಲ ಬಂಧನವ. ಮೂರು ಹಿಡಿ
ಮಣ್ಣು ಸಲ್ಲಿಸಿ ಬರುವ ದಾರಿಯಲ್ಲಿ ಬಿತ್ತನೆಗೆ
ಕಾದ ಹೊಲಗದ್ದೆ ; ಹಳ್ಳದಲಿ ಜುಳುಜುಳು ನೀರು
ಬದುಕು ಚಿಗಿವುದು ಕಾಣದಿದ್ದರು ಅವರ ಬೇರು.

ಪರಮಾರ್ಥದ ಕತೆ

ಡಾವರ ಡಾಕಿನಿ ಶಾಕಿನಿ ದೇವತೆ
ಉಜ್ಜಯಿನಿ ನಗರದಲಿ ಕತೆಗೆ ಪ್ರಖ್ಯಾತೆ.
ಪುಕ್ಕಟೆ ಪುರಾಣವಲ್ಲ, ಒಂದೊಂದು ಕತೆ ಹೇಳಲು
ಸಾವಿರ ಗದ್ಯಾಣ.

ಬಡ ಬ್ರಾಹ್ಮಣ ದೇವದತ್ತನಿಗೆ ಕತೆ ಕೇಳುವ
ಹುಚ್ಚು. ಹೇಗೊ ಹಣ ಕೂಡಿಸಿ ಕೈಕೊಂಡ
ಪಯಣ. ದಾರಿಯಲ್ಲಿ ದಟ್ಟರಣ್ಯದ ನಡುವೆ
ತಟ್ಟನೆ ಬ್ರಹ್ಮರಾಕ್ಷಸ ನೋಡಿ ತಿನಲು ಧಾವಿಸಿದ:
ಎಲ್ಲಿಂದ ಬಂದಿತೊ ಧೈರ್ಯ ದೇವದತ್ತನಿಗೆ
ವಿವರಿಸಿದ ಕತೆಗಾಗಿ ಕಷ್ಟಪಟ್ಟು ಕೂಡಿಸಿದ
ಹಣದ ವೃತ್ತಾಂತ : 'ದಯಮಾಡಿ ನನ್ನ ಆಶೆಗೆ ಭಂಗ
ತರಬೇಡ, ಐದು ರಾತ್ರಿಗಳ ಕೊಡು, ಕತೆ ಕೇಳಿ
ತಪ್ಪದೆ ಬರುವೆ'.

ಏನೆನಿಸಿತೊ ರಕ್ಕಸನೊಪ್ಪಿಕೊಂಡ. ಅಷ್ಟೇ ಅಲ್ಲ
ಹಸಿದಿಹನೆಂದು ಅವನಿಗಾಹಾರ ಕೊಟ್ಟ. ಹರ್ಷದಲಿ
ದೌಡಾಯಿಸಿದ ಉಜ್ಜಯಿನೆಯೆಡೆಗೆ ದೇವದತ್ತ.
ದೇವರು, ದೊರೆ, ಪಂಡಿತರನೆಲ್ಲ ಪಣ ತೊಟ್ಟು
ಮಾರುತ್ತ ಹಲ ಬಗೆಯಲ್ಲಿ ಹೊಕ್ಕಾಡುವ
ಡಾವರ ಡಾಕಿನಿಯ ಮನೆಯ ಹುಡುಕಿ ಒಳಹೊಕ್ಕ.

ಒಯ್ದ ಹಣವನ್ನೆಲ್ಲ ಸುರಿದು, 'ತಾಯೆ ಕತೆ ಹೇಳು'
ಎಂದ. ಏಕಚಿತ್ತದಲಿ ಕೇಳಬೇಕೆಂದು ಎಚ್ಚರಿಸಿ

ಹೇಳಿದಳು. 'ಒಮ್ಮೆ ಕಂಡವರು ಮತ್ತೊಮ್ಮೆ ಕಂಡರೆ ನೆಂಟರು - ಇದುವೆ ಪರಮಾರ್ಥ ಕತೆ'.

ಕೇಳಿ ಅಚ್ಚರಿಬಟ್ಟು, ಕುಂಟಣಿಯ ಬೀಳ್ಕೊಂಡು ರಕ್ಕಸನೆಡೆಗೆ ಬಂದು ನೋಡಿದ್ದೆ ತಡ, 'ಏನು ಭಾವ ಬಂದಿರಾ? ನೀವು ಕೇಳಿದ ಕತೆಯ ನನಗು ಹೇಳಿ' ಎಂದ ಬ್ರಹ್ಮರಾಕ್ಷಸನ ಎಂದಿಲ್ಲದುತ್ಸಾಹದಿಂದ. 'ಧರೆಯೊಳಗೆ ಗುಣಿಗಳಾದವರು ಒಂದೊಮ್ಮೆ ಕಂಡು, ಮತ್ತೆ ಕಂಡರೆ ಅವರೆ ನೆಂಟರು, ಇದೆ ಪರಮಾರ್ಥಕತೆ ಎಂದು ಹೇಳಿದಳು' ಎನ್ನಲು ಬೆಕ್ಕಸಗೊಂಡ ರಕ್ಕಸನು ದೇವದತ್ತನಿಗೆಂದ: 'ನಿನ್ನನೀ ಮೊದಲು ನಾ ಕಂಡುದಲ್ಲದೆ ಆಹಾರವನ್ನೂ ಕೊಟ್ಟೆ. ಅದರಿಂದ ನೀ ನನಗೆ ನಂಟನೆ'.ರಾಕ್ಷಸನು ದೇವದತ್ತನ ತಿನದೆ ಸಂರಕ್ಷಿಸಿದ.

ಗದ್ಯವೊ ಪದ್ಯವೊ, ಸದ್ಯ ಇದ್ದಕ್ಕಿದ್ದಂತೆ ಅದನಿಲ್ಲಿ ಉದ್ಧರಿಸಿರುವ ಪಂಚತಂತ್ರದ ಕತೆಯ ಇನ್ನೊಮ್ಮೆ ಕೇಳಿ, ಅದರ ಪರಮಾರ್ಥವನು ಉಳಿದವರಿಗೂ ಹೇಳಿ.

ಮಡಿ

ಬಿಡುವಿರದ ಕೆಲಸಗಳಲ್ಲಿ ತೊಡಗಿದರೂ
ಶ್ರೀಮಾತೆ ಶಾರದಾದೇವಿ, -ಅವರಿಗೆಲ್ಲೆಡೆಗು ಲಕ್ಷ್ಯ.
ಮಾತೃವಾತ್ಸಲ್ಯದ ಸರಳ ಆದರಾತಿಥ್ಯ.
ಸಣ್ಣಸಣ್ಣ ಸಂಗತಿಗೂ ತೆರೆದ ಮನ,
ಸಾಧ್ಯವಾದಷ್ಟೂ ಮೌನ.

ಹೀಗೊಂದು ದಿನ, ಅವರ ಮನೆ ಅಡುಗೆಯವಳನು
ನಾಯಿ ಮುಟ್ಟಲು, ಆಕೆ ಕೆಲಸ ಕೆಟ್ಟಿತು ಎಂದು
ಚಡಪಡಿಸಿದಳು: ಮಹಾ ಮಡಿವಂತ ಬ್ರಾಹ್ಮಣ
ಮಹಿಳೆ. ಆಗ ಒಂಬತ್ತು ಗಂಟೆ ರಾತ್ರಿ
ಕತ್ತಲೆಯಲ್ಲಿ ಹೊರಗೆ ಕಣ್ಣಾಡಿಸಿದಳು.

ಮೈಲಿಗೆಯ ಕಳೆದುಕೊಳ್ಳಲು ಮತ್ತೆ ಮಾಡಲೇ
ಬೇಕು ತಾನು ಸ್ನಾನ. ಹೊರಟು ನಿಂತಳು ಹತ್ತಿರದ ಕೆರೆಗೆ.
'ಈ ಚಳಿ ರಾತ್ರಿಯಲಿ ಬೇಡ; ಕೈಕಾಲು ತೊಳೆದು
ಮಡಿಸೀರೆ ಉಡು, ಸಾಕು' ಎಂದರು ಶಾರದಾಂಬೆ.
'ಅದು ಹೇಗೆ ಮಡಿಯಾದೀತು' ಎಂದು ಸಂದೇಹದಲಿ
ಗೊಣಗಲು, 'ಸ್ವಲ್ಪ ಗಂಗಾಜಲವ ಕುಡಿ' ಎಂದರು
ತಾಯಿ. ಅದಕು ವಿಶ್ವಾಸವಿರದೆ ಅಸಮಾಧಾನಗೊಂಡ

ಆ ಮಡಿ ಹೆಂಗಸಿಗೆ ಮನದಲ್ಲಿ ಗಲಿಬಿಲಿ.
'ಹಾಗಿದ್ದರೆ ನನ್ನ ಮುಟ್ಟು'-
ಮಾತೆಯ ಈ ಮಾತೆ ಮಿಂಚಿನೊಲು ತಾಗಿ
ತಟ್ಟನೆ ಹೋಗಿ ಮುಟ್ಟಿದಳು.
ಸಂಪ್ರದಾಯದ ಕಿಲುಬು ತೊಳೆದು
ಹೃದಯದ ಪಾತ್ರೆ ಹೊಳೆದು
ಅನುಭವದಡಿಗೆಗಾಕೆ ಅಣಿಯಾದಳು.

ಭಾವ - ಚಿತ್ರ - ಬದುಕು - ೧

ಏನೆಲ್ಲ ಒಳಗಿಟ್ಟು, ನಗೆಯ ಚೌಕಟ್ಟಿನಲಿ
ಕುಳಿತಿರುವ ಭಾವಚಿತ್ರಗಳ ಹಿಂದಿನ ರಟ್ಟು-
ನಾಲ್ಕು ಗೋಡೆಗಳ, ಮೂಲೆಗಳ ನಡುವಿನ ಗುಟ್ಟು.
ಬಯಲು: ಕಿಡಕಿಯಾಚೆಗೆ, ಗಾಳಿಪಟ ದೂರದಲಿ
ಬಾನಿಗೇರಿದೆ ಉದಾರ, ಆಡಿ ವೀರೋಚಿತ
ಪಾತ್ರ. ಸುಸೂತ್ರ ಇಳಿವ ಲಕ್ಷಣ ಕಂಡು, ಮೆಲ್ಲ-
ಗೆಳೆದರೆ ನೆಲದ ಬಾಂಧವ್ಯಕ್ಕೆ ಚ್ಯುತಿಯಿಲ್ಲ.
ಕಂಡದ್ದು ಹೇಗೂ ಕಾಣಿಸಿಕೊಳ್ಳುವ ಸಂಕೇತ.
ವರ್ಣಚಿತ್ರದ ಹಿಂದೆ ವರ್ತಮಾನದ ಕುಂಚ
ಆಡುತಾಡುತ್ತಲೆ ಮೂಡುವ ಭವಿಷ್ಯದ ರೇಖೆ.
ವಾಸ್ತವದಲ್ಲಿ ಕಲ್ಪನೆಗೆ ಶಾಖೋಪಶಾಖೆ:
ಅಲ್ಲಿಯೇ ಗೂಡು ಕಟ್ಟುವುದು ಹಾಡಿನ ಪ್ರಪಂಚ.
ಅದಕಾಗಿಯೆ ಪ್ರಪಂಚದಿಂದಲೆ ಪಾರಮಾರ್ಥ
ಎಂದಿರಬೇಕು ಅನುಭಾವಿಗಳು ; ಎಲ್ಲಿ ಸ್ವಾರ್ಥ?

ಭಾವ - ಚಿತ್ರ - ಬದುಕು - ೨

ಏಕರೇಖಾ ಚಿತ್ರದಲ್ಲು ಮೂಡಿಸಬಹುದು
ಭಾವಲೋಕದ ಅನೇಕಾನೇಕ ರೇಕುಗಳ.
ಲೋಲಕದ ನಿತ್ಯತೂಗಾಟದಲಿ ಸಮತೋಲ-
ವಿರೆ, ಗೋಡೆ - ಗಡಿಯಾರದಲಿ ಮುಳ್ಳು ತಿರುಗುವದು.
ದೇವಾಲಯದ ಗಂಟೆಗೂ ಇದಕು ಸಂಬಂಧ
ಉಂಟೆ? ತಿಳಿಯದು ಹೊತ್ತಿನ ಕಡೆಗೆ ಗಮನವಿಡದೆ
ದುಡಿಯುವ ಜನಕೆ ಬಿಡುವಿಲ್ಲ. ಅದೇ ಮರ್ಯಾದೆ.
ಬುದ್ಧಿಜೀವಿಗೆ ಸದಾ ಸಿದ್ಧವಾದ - ವಿವಾದ.
ವ್ಯಂಗ್ಯ ಚಿತ್ರಕ್ಕು ಇದೆ ಪಾತ್ರಾಪಾತ್ರ ವಿವೇಕ,
ಸದ್ಭಾವ. ಛಿದ್ರಾನ್ವೇಷಿಗದರರದೆ ಅಭಾವ;
ತಿಳಿನೀರು ಕುಡಿಯದೆ ಕದಡಿ ರಾಡಿಗೊಳಿಸುವ
ರೂಢಿ; ಚುಚ್ಚಿದ್ದೆಲ್ಲ 'ಹಚ್ಚೆ' ಎನ್ನುವ ಕುಹಕ.
ಎಸೆದು ಕನ್ನಡಿ ಹರಳ, ಚೂರಿನಲಿ ಮುಖ ನೋಡಿ
ಮೀಸೆ ತೀಡುವ ವಿದೂಷಕ ನಾಯಕನ ಜೋಡಿ.

ನಿಸರ್ಗ - ಮಾನವ

ಬಿರುಸಾದ ಭೂಮಿಯಲ್ಲಿಳಿದು, ಹಸಿಯು ಹತ್ತುವ -
ವರೆಗು ದೂರ ದೂರಕ್ಕೆ ಚಾಚಿ ಬೇರು, ಗಿಡದ
ಅಸ್ತಿತ್ವಕ್ಕೆ ಹೋರಾಡಿ, ಕೊನೆಗೂ ಪಡೆದ
ನೀರು ಬಾಳಿನ ತವರು: ಪ್ರೀತಿ -ಮೈತ್ರಿಯ ಪರ್ವ.
ಚೈತ್ರದ ಚಿಗುರು ಸೃಷ್ಟಿಶಕ್ತಿಯಾವಿಷ್ಕಾರ.
ಸುಖ-ದುಃಖ, ಉದಯಾಸ್ತ, ಹುಟ್ಟು -ಸಾವಿನ ಹಾಸು-
ಹೊಕ್ಕಿನಲಿ ವಿಶ್ವವಿಲಾಸ. ಕನಸ ಕಂಡರಿಸು
ಪೂಜಿಸು, ಉಪಭೋಗಿಸು, ಬದುಕನರಳಿಸು ಪೂರ.
ನಿನ್ನಿಂದ ಆಚೆ ನೋಡುವ ದೃಷ್ಟಿ ಪಡೆವರೆಗೆ
ಹಿಡಿ ಕೈಬಿಡುವಾಟ. ದ್ವಂದ್ವದಲಿ ಜೀವನದ
ನೆಲೆ. ಕಲೆಯಾಗಿ ಮಾಗಿಸುವ ದಿವ್ಯಾನುಭವದ
ಹದಕ್ಕೊರಗಿ ಓಗೊಡು ಅಂತರಂಗದ ಕರೆಗೆ.
ನಿಸರ್ಗ ಗುರುತಿಸದು ಒಳಿತು - ಕೆಡುಕಿನ ಭೇದ
ಭಾವದ ವಿಕಾಸದಲಿ ಮಾನವಗದರ ಸ್ವಾದ.

ಸರಳತೆ

ಶ್ರೀ ಶಾರದಾದೇವಿ
ಕಲ್ಕತ್ತೆಗೆ ಮೊದಲ ಸಲ ಹೆಜ್ಜೆಯಿಟ್ಟಾಗ
ಹದಿಹರಯದ ಯುವತಿ.
ಹಳ್ಳಿಬದುಕಿನ ಸರಳ ಸಾಕಾರಮೂರ್ತಿ.
ನಗರದ ಮನೆಯೊಂದರೊಳಗೆ ಇವರು ಅತಿಥಿ.
ಒಮ್ಮೆ ಸ್ನಾನದ ಕೋಣೆಯಲ್ಲಿ
ಇವರು ತಿರುಗಿಸಲು ನಲ್ಲಿ
'ಹಿಸ್' ಎಂದಿತು ಒಂದು ಹನಿಯೂ ಬರದೆ -
ಗಾಬರಿಗೊಂಡು ಓಡಿಬಂದರು ಹೊರಗೆ.
ಹೇಳಿದರು ಅಲ್ಲಿ ಕೂಡಿದ ಹೆಣ್ಣು ಮಕ್ಕಳಿಗೆ:
'ಹಾವು ಸೇರಿಕೊಂಡಿದೆ ನೋಡಿ ಆ ನಲ್ಲಿಯೊಳಗೆ!'
ಕೇಳಿ ಅವರೆಲ್ಲ ಬಿದ್ದು ಬಿದ್ದು ನಕ್ಕರು. ಕೊನೆಗೆ
ವಿಷಯ ತಿಳಿದು ತಾವೂ ನಕ್ಕರು ಅವರ ಜೊತೆಗೆ,
ನಾಚಿಕೊಳಲಿಲ್ಲ ತಮ್ಮ ಅಜ್ಞಾನಕ್ಕೆ;
ಅವಮಾನವೆಂದು ಕೂಡ ಭಾವಿಸಲಿಲ್ಲ, ಅಂಥ ಮುಗ್ಧೆ.

ಶ್ರೀರಾಮಕೃಷ್ಣರು ಶಿಷ್ಯರಿಗೆ ಹೇಳುತ್ತಿದ್ದರು ಸದಾಕಾಲ
'ಮನುಷ್ಯ ಸರಳನಾಗುವುದು ಅನೇಕ ಜನ್ಮಗಳ ತಪಸ್ಸಿನ ಫಲ.'

ಬೀಜಾಸುರ

೧

ಕೈತೋಟದಲ್ಲಿ
ಚಂದಕ್ಕೆ ಹಚ್ಚಿದ ಪಾಪಾಸು ಕಳ್ಳಿಗೆ
ಥೇಟು ಮನುಷ್ಯನದೆ ಆಕಾರ.
ಮಕ್ಕಳು ತೆಗೆವ ರಬ್ಬು ಚಿತ್ರ.

ನನಗೆ ನೆನಪಿರುವಂತೆ
ನಮ್ಮ ಗ್ರಾಮದ ಸುತ್ತು ರಾಕ್ಷಸನಂತೆ
ಬೆಳೆದು ಹಬ್ಬಿರುವ ಡಬಗಳ್ಳಿ.
ಮೈತುಂಬ ಸೆಟೆದ ಮುಳ್ಳು.
ಅಂಗೈದಪ್ಪದೆಲೆಗೆ ದುಂಡು ಬೆರಳುಗಳಂತೆ
ರಕ್ತಗೆಂಪಿನ ಹಣ್ಣು.
ಹಾವು ಹರಿದಾಡಿರುವ ಠಾವು.
(ಅಲ್ಲೇ ದಾರಿ ಮಾಡಿಕೊಂಡು ಹೋಗುತಿದ್ದರು
ಜನ ದಿನಾ ಬೈಲು ಕಡೆಗೆ)
ಅಂಥ ಬಂಧನದಲ್ಲು ಅಲ್ಲೊಂದು
ಇಲ್ಲೊಂದು ಮುಳ್ಳು ಕಳ್ಳಿಗೆ
ಒಳ್ಳೆ ಜೇನು ಕಟ್ಟಿದ ಹುಟ್ಟು -
ಒಟ್ಟು ಎಳೆಯ ಮನಸಿಗೆ ನಿಗೂಢ.

ಯಾರು ಕಂಡು ಹಿಡಿದದ್ದೊ
ತಂದುಬಿಟ್ಟರು ಸಣ್ಣಗಿನ ಅಚ್ಚ ಬಿಳಿಯ ಹುಳ
ಡಬಗಳ್ಳಿ ಪೊದೆಯೊಳಗೆ.
ದಿನ ದಿನಕ್ಕೆ, ನಿಮಿಷ ನಿಮಿಷಕ್ಕೆ ಬೆಳೆದು

ಹುಳದ ಸಂತಾನ, ಹೀರಿದವು
ಆಮೂಲಾಗ್ರ ಕಳ್ಳಿ ಸಸ್ಯದ ಜೀವರಸ-
ಒಣಗಿ ಅಸ್ಥಿಪಂಜರವಾಗುವರೆಗೆ
ಉರುವಲಾದವು ಗುಡಿಸಲುಗಳಲ್ಲಿ ಒಲೆಗೆ.
ಊರ ಬಯಲಲ್ಲಿ ಮಾತ್ರ
ನೆಲಕ್ಕಂಟಿ ಹಬ್ಬಿದ ಹಾದರಗಿತ್ತಿ ಮುಳ್ಳು
ಆದರಿಸುತ್ತವೆ ತುಳಿದವರನೀಗಲೂ.

೨

ಹಳ್ಳಿ ಪಟ್ಟಣವೆನದೆ ಈಗ
ಎಲ್ಲೆಂದರಲ್ಲಿ ಕಣ್ಕಸುರು ಪಾರ್ಥೇನಿಯಂ.
('ಕಾಂಗ್ರೆಸ್‌ಕಸ'ವೆಂದು ಬೇರೆ ಹೆಸರು ಕೊಟ್ಟಿದ್ದಾರೆ-
'ಇಗೋ ಕನ್ನಡ'ದಲ್ಲಿ ನೋಡಬೇಕು)
ಮುಳ್ಳಿಲ್ಲ, ಬಿಳಿಯ ಹೂಗಳು ಬೇರೆ; ಹಬ್ಬಿ
ಹರಡುತ್ತಲೇ ಇದೆ ರಾಜಾರೋಷವಾಗಿ
ಲಂಚ ರುಷುವತ್ತಿನಂತೆ.
ಮುಟ್ಟುವುದು ಒತ್ತಟ್ಟಿಗಿರಲಿ, ಇದರ ಮೇಲಿಂದ
ಬೀಸುವ ಗಾಳಿ ಸೋಕಿದರು ಕೂಡ
ಅಪಾಯ, ಎಂಥದೊ ಅಲರ್ಜಿ,
ಮತ್ತಾವುದೊ ರೋಗರುಜಿನ.
ಬೇರು ಸಹಿತ ಕಿತ್ತು ಸುಟ್ಟರೆ ಮಾತ್ರ
ಸಾಯಬಹುದು ಈ ಬೀಜಾಸುರ.
ಇಲ್ಲದಿದ್ದರೆ, ಹೊಸ ಸಹಸ್ರಮಾನದ
ಪ್ರಗತಿ ಪುರುಷನಿಗೆ
ಇದೇ ತುರಾಯಿ.

ಯಾವ ಪುರುಷಾರ್ಥಕ್ಕೆ?

ವರುಷಕ್ಕೊಮ್ಮೆ ಹೊಸ ಕವಿತೆ ಹೊಮ್ಮಿಸುವ ಪ್ರಕೃತಿ
ಶಬ್ದವಿಲ್ಲದೆ ಬಾಡಿದೆಲೆ ಕಳಚಿ, ಬೋಳಾಗಿ
ಟೊಂಗೆಗಳ ಅಂಗವಿಕಲತೆಯಲ್ಲಿ ನಿಸ್ಸಂಗಿ.
ಬಟಾಬಯಲು ಪಟದಲ್ಲಿ ಸ್ಪಷ್ಟವಿರದಾಕೃತಿ
ಸುಂಟರಗಾಳಿಗೆದ್ದ ಕೆಂಧೂಳಿ, ಕಪ್ಪು ಮೈ-
ಬೆವರಿಗಂಟಿದ ರಸ್ತೆ - ದುರವಸ್ಥೆ; ದುರಸ್ತಿಗೆ
ತೆರೆದ ಚರಂಡಿಗಳ ನೀರು ಹೊಸ್ತಿಲವರೆಗೆ.
ಮುಂಗಾರು ಬಂಡೆದ್ದು ನೋಡಬಹುದೊಂದು ಕೈ.
ಎಲ್ಲಿಂದ ಕೈಹಚ್ಚಲಿಹುದೊ ಏರಿದ ಹುಚ್ಚು
ಇಳಿಸಲಿಕೆ, ಕಾಣದಿದೆ ಸ್ವಚ್ಛಗೊಳಿಸುವ ಪೊರಕೆ.
ಕುಸಿದಿಹುದು ಇಲಿ, ಹೆಗ್ಗಣಗಳ ರಾಜ್ಯಭಾರಕೆ
ನೀತಿ-ನೆಲೆಗಟ್ಟು. ಕೈಗೆಟುಕದಾಗಿದೆ ಸ್ವಿಚ್ಚು.
ಚೈತ್ರವನು ಕೂಗಿ ಕೂಗಿ ಕರೆತರುವ ಕೋಗಿಲೆ
ಯಾವ ಪುರುಷಾರ್ಥಕ್ಕೆ ನಮ್ಮೀ ಕೊಂಬು -ಕಹಳೆ?

ನಿಯಮ - ಸಂಭ್ರಮ

ಗಾಳಿಯಲಿ ಗಿರಿಗಿರಿ ತಿರುಗಿ ಉದುರಿದೆಲೆ ರಾಶಿ.
ಗಾಸಿ ಗೊಳಿಸದೆಯೆ ಮೆಲ್ಲಗೆ ಗುಡಿಸಿ ನೀರೆರೆಯೆ
ಒಂದೊಂದು ಗಿಡದ ಬುಡದಲ್ಲು ಹೊರಬೀಳುತಿವೆ
ಕಟ್ಟಿರುವೆ; ತಂಪು ವರ್ತುಲದೊಳಗೆ ಗುಂಪಾಗಿ.
ಮರುಗಳಿಗೆ ಸರಳ ರೇಖೆಯ ಸಾಲು, ಗುರಿ ತಲುಪಿ
ಬರುವ ಅವಸರ ನಡಿಗೆ : ಬೇರು-ಕಾಂಡದ ರುಚಿಗೆ.
ಮೇಲೆ ಚಿಗುರೆಲೆಗೆ ಹೂಂಬಿಸಿಲ ಹೊಗರು. ನಂಬಿಗೆ -
ಯಿಟ್ಟು ಗೂಡು ಕಟ್ಟಿದೆ ವಲಸೆ ಬಂದಿಹ ಹಕ್ಕಿ.
ಎತ್ತರದ ತೆಂಗಿನೊಳಗೆಳ ನೀರು ತುಳುಕದಿದೆ.
ಇಲ್ಲೆ ಹತ್ತಿರದ ಬಾಳೆ ಇಷ್ಟಗಲ ಹರಡಿ
ಸಫಲವಾಗಿದೆ ಕೊನೆಗೆ. ಮಾಮರದ ತುಂಬ ಮಿಡಿ.
ಈಗ ಕುಡಿವಡೆದ ಮಲ್ಲಿಗೆ ಮೊಗ್ಗು ಹಿಗ್ಗಲಿದೆ.
ಉದ್ದಕ್ಕು ಸಿದ್ಧಗೊಳ್ಳುವದೆ ಸೃಷ್ಟಿಯ ನಿಯಮ.
ಬದ್ಧತೆಯ ಮೀರಿ ಬುದ್ಧಿಯಾಟೆಗಿದೆ ಸಂಭ್ರಮ.

ಬೆಳಗಿನ ಭೆಟ್ಟಿ

('ಎನ್ಕೆ'ಯವರೊಂದಿಗೆ)

ಬೆಳಗಿನ ವಿಹಾರದಲ್ಲಿಲ್ಲ 'ಮುಂಗಾಲ್ ಪುಟಿಗೆ'.
ಎಂಟು ದಶಕವ ದಾಟಿ ಹೆಗುರು - ಹೆಜ್ಜೆಯ ನಡಿಗೆ.
ಕುಂಟು ನೆಪ ಕೇಳಲೇ ಬೇಡಿ, ನಿಷ್ಕಲ್ಮಷ ನಗೆ.
ನಾರಾಣಪ್ಪನ ಕೃಷ್ಣಸ್ತುತಿಯಿಂದ ಬೆಚ್ಚಗಿದೆ
ಸುತ್ತಿರುವ ಸ್ಕಾರ್ಫು. ಹಿಡಿದ ಕೊಡೆಗೆಷ್ಟೊಂದು ಮಳೆ-
ಬಿಸಿಲು! ಅದರದೇ ದೊಡ್ಡ ಕಥೆ : 'ನಾನಿಯ ನೆನಹು'.
ಏಕಾಂಕದಲಿ ನಕ್ಕು, ಏಕಾಂತದಲಿ ಅತ್ತು
ಹರಟೆ ಹೊಡೆದಾಗ ಪೂರ್ಣಾಂಕ. ಸಂಗೀತದಲೆ-
ಯಲ್ಲಿ ಸಂತಸ - ಲೀಲೆ. ಎಡಬಲದಿ ಜೋಲಿ ಹಿಡಿ-
ಯಲು ಬೇಂದ್ರೆ - ವಿನಾಯಕ; ಅರವಿಂದರಿಗೆ ನಮನ.
ಜುಳು ಜುಳು ಹರಿವ ಝುರಿಯಂತೆ ಬರೆವುದೆ ಧ್ಯಾನ.
ಅಪೇಕ್ಷೆ - ಉಪೇಕ್ಷೆಗಳಾಚೆ ಎಲ್ಲೊ ಬಾನಾಡಿ-
ಹಾಡು ಕಿವಿಗಿಳಿದಾಗ ಮರೆವುದೆಲ್ಲ ವಿಷಾದ -
ತಕ್ಷಣ ತೆರೆವುದಂತಃಕರಣ : ಮಾನಿಷಾದ.

ಮೂರಾಬಟ್ಟೆ

ಹುಲ್ಲು - ಕಸ ಕಿತ್ತು ಹಸನಾದಾಗ ಹೂಗಿಡದ
ಅಸ್ತಿತ್ವಕ್ಕೆ ಕಳೆ. ಹೊಲ - ಗದ್ದೆ ಮಧ್ಯದಿ ಹುಲು -
ಸಾದ ಬೆಳೆ. ಮಳೆ ಬಂದು ನೆನೆಸಿ ಜೀವದ ಗೆಲುವು
ಚೆಲುವಾಗಿ ಅಚ್ಚಮಾನಸದಿ ಭಾವದುಕ್ಕಂದ.

ಕೊಳೆಕೊಚ್ಚೆ ಹರಿದ ಸಂತಸವೆಲ್ಲ ನಾಲ್ಕುದಿನ.
ಮತ್ತೆ ಮುಚ್ಚಿದ ಗುಂಡಿ ತೆರೆದು ಹರಡಿದ ಕೊಚ್ಚೆ
ಸೊಳ್ಳೆ ಪರಿವಾರ. ವಾಹನವನೆತ್ತೆತ್ತಿ ಒಗೆ-
ದು, ಹೊಟ್ಟೆ ಹುಣ್ಣಾಗಿಸುವ ಬಟ್ಟೆ, ಆಕ್ರಂದನ.

ಎಲ್ಲರೂ ನಿತ್ಯ ನಡೆದಾಡಿದರು ಯಾರಿಗೂ
ಸೇರದ ದಾರಿ. ದುರಸ್ತಿಗೆ ಕಾದು ಕುಳಿತಿಹರು.
ಅವಸರದಲ್ಲಿ ದಾಟಿ ಹೋದದ್ದೆ ಬಂತು. ಮರು-
ವಿಚಾರಕ್ಕಾಸ್ಪದ ಅಪಘಾತವಾಗುವವರೆಗು.

ಇಷ್ಟಕ್ಕು ದೇವದೂತನೆ ಬರಲೆಂಬ ದೂರು,
ದುಷ್ಟಸಂಹಾರ ಸರಿ; ಎಲ್ಲಿದ್ದಾರೆ ಶಿಷ್ಟರು?

ಅವಸ್ಥೆ

ಸಂಜೆಸೂರ್ಯನ ಬಿಂಬ ಪ್ರಜ್ವಲಿಸಿ ಪ್ರಶಾಂತ
ಕೆಳಗಿಳಿದ ನಂತರ ಮಬ್ಬು. ಸಂತಸ ಶೂನ್ಯ
ಗಳಿಗೆಯಲಿ ನೆನಪಿನಾಳದಿ ಮುಳುಗಿ, ಅನ್ಯೋನ್ಯ
ಸಂಬಂಧಗಳ ಕೊಂಡಿ ಕಳಚಿ ಚಿಂತಾಕ್ರಾಂತ.

ಅಂಗಾಲು ಜುಮ್ಮೆಂದು, ತಲೆಹಿಡಿದು, ಬಾಯಾರಿ
ವಿಲಕ್ಷಣ ಸ್ಥಿತಿಗೆ ಸಂದ, ನಂಬುಗೆಯ ಮಂದ
ಮುಸುಕಿನ ನಡುವೆ ಧ್ಯಾನಸ್ಥ ಚಿಕ್ಕೆ - ದಿಗ್ಬಂಧ.
ಮೆಲ್ಲಗೆ ನಸುಕು ಹರಿದು ಬೆಳಕು ನಿದ್ದೆಯ ಬುಗುರಿ.

ಖಿನ್ನತೆಯ ಕುಸಿತದಿಂದೆದ್ದಿಹ ಹಸನ್ಮುಖಿದಿ
ಹೊಂಗಿರಣ ಕೈಚಾಚಿ ಬಾಚಿ ಜಗವ ತಬ್ಬುವ
ತವಕ. ಹೂಹೂವ ಬಣ್ಣದಿ ಕಂಪು ಕಲಸಿರುವ
ಗಾಳಿ ತೀಡಿ, ಹಕ್ಕಿ -ಹಾಡಿಗೆ ಸೃಷ್ಟಿ ನೆಮ್ಮದಿ.

ಸುತ್ತುಮುತ್ತಲು ಮತ್ತೆ ಪ್ರೀತಿ ಮುತ್ತಿನ ಮಾಲೆ.
ದೌರ್ಬಲ್ಯದರಿವಿದ್ದು ಗೆದ್ದ ಹೃದಯದ ಲೀಲೆ.

ಸೌಂದರ್ಯ ಸ್ಪರ್ಧೆ

ಸೃಷ್ಟಿ-ಸಂದರ್ಭಕ್ಕೆ ರೂಪ ಅಸ್ಪಷ್ಟ; ದೃಷ್ಟಿ
ತಾಗುವದೆಂದು ಸೆರಗು ಮರೆಮಾಡುವಳು ತಾಯಿ:
ಬಗಲೊಳಗಿರುವ ಕೂಸು ಹಗಲುಬೆಳಕಿಗೆ ಬಾಯಿ
ಬಿಡುವಂತೆ, ತೆರೆದು ಬಟ್ಟಲುಗಣ್ಣು ಬಿಗಿಮುಷ್ಟಿ-
ಯೊಳಗೆ ಹಿಡಿದಿದೆ ಗುಟ್ಟು. ಕಣ್ಣು, ಮೂಗು, ಗಲ್ಲದ
ಗುಳಿ -ಎಲ್ಲ ಚೆಲುವೆ: ಅತ್ತು ರಂಬಾಟ ಮಾಡುವ
ಆಟವೂ. ರೂಪಸಿಗು ಒಳಗೆ ಬಡಿದುಕೊಳ್ಳುವ
ಹೃದಯ. ಕೈಕೊಂಡ ಕಾರ್ಯಕೌಶಲ ಮೈ -ಮನದ
ಸೌಂದರ್ಯ ಶಿಖರ. ಅಲ್ಲಿಂದಲೇ ದೂರ ಗುರಿ-
ಯೆಡೆಗೆ ಸಾಗುವ, ದಾಹ ತಣಿಸುವ ನದಿಗಳುಗಮ
ಎಲ್ಲರೊಡಲೊಳಗು ಕಡಲು - ತೆರೆ ನೊರೆಯ ಸಂಭ್ರಮ.
ಮೇಲೆ ನೀಲಾಗಸದಿ ಮೇಘ ಶಿಲ್ಪದ ಕುಸುರಿ.
ಸ್ಪರ್ಧೆಯರಿಯದ ವಿಶ್ವಸೌಂದರ್ಯ ಸ್ವಚ್ಛಂದ
ಬುದ್ಧಿ ಚತುರತೆ ಕೊಂಚ ತಿದ್ದಿತೀಡಿದ ಗಂಧ.

ದಂತಪಂಕ್ತಿಯ ನಡುವೆ

ದಂತಪಂಕ್ತಿಯ ನಡುವೆ ಎಂತಿರ್ಪುದದು ಜಿಹ್ವೆ?
ಕಚ್ಚಿ ಕಡಿದದ್ದನ್ನು ಮೆಚ್ಚಿ ಮೆಲ್ಲಗೆ ಎಳೆದು
ಮೆತ್ತಗಾಗಿಸಿ ಘನವ, ರಸವತ್ತಾಗಿ ಸವಿದು
ಭಿನ್ನರುಚಿಗಳಿಗವಿಚ್ಛಿನ್ನ ಸೆಲೆಯಾಗಿರುವೆ.

ಹೊಟ್ಟೆ ಕೆಟ್ಟರೂ, ಮಾತಿನಲಿ ಭಟ್ಟಿ ಕೆಟ್ಟರು
ಬರುವ ಅಪವಾದಕ್ಕೆ ಗುರಿಯಾಗಿ, ನುರಿಯಾಗಿ
ಹಿಂಡಿ ಒಣಗಿಸುವೆ - ಎಲ್ಲದಕು ಅಣಿಯಾಗಿ.
ಆಡಿದ್ದು ತಿರುಗಿ ಬಾರದು ಏನು ಕೊಟ್ಟರೂ.

ಒಂದೊಂದಾಗಿ ಹಲ್ಲು ಬೀಳುತ್ತ ಹೋದಂತೆ
ನುರಿಸುವದು ಕಷ್ಟ ಕಟುವಾಸ್ತವ ಪದಾರ್ಥಗಳ,
ಉಚ್ಚರಿಸುವದು ಕೂಡ. ಉಳಿದಷ್ಟು ದಂತಗಳ
ಬಳಸುವಾಗಲು ಹೊಡೆತ ಬೀಳುವುದು ನಾಲಗೆಗೆ.

ಹುಟ್ಟಿಸಿದವನಿಗೆಲ್ಲಿ ಕಟ್ಟಿಸಿರುವ ಹಲ್ಲಿನ
ಪರಿವೆ? ನಮಗೂ ಇಲ್ಲ ಮೊದಲಿನ ಅಟ್ಟಹಾಸ.

ಮೆರವಣಿಗಿ

ಸಾರೋಟು ಮೆಲ್ಲಕ ಸಾಗೇತಿ.
ಕುದುರಿಗೂ ರಗಡ ಸಿಂಗಾರ ಮಾಡ್ಯಾರ.
ಅದಕ ಅದರದs ನಡಗಿ
ರೂಢಿಯಾಗೇತಿ.
ನನಗ ಒಳಗೊಳಗ ಜೀವ ಚಡಪಡಿಸಿ
ಕಣ್ಣು ಒದ್ದಿ ಆಗ್ಯಾವ.
ಹೂವಿನ ಹಾರ
ಅದೆಷ್ಟು ಭಾರ!
ಶಬ್ದಗಳೆಲ್ಲಾ ಕರಗಿ
ಕಲಕ ಮಲಕಾಗಿ
ಕವಿತಾ ಅನ್ನೂದು ಮಂಜ್‌ಮಂಜಾಗಿ
ಮಟಾ-ಮಟಾ ಮಧ್ಯಾಹ್ನದಾಗ
ಕಿವಿಯೊಳಗ ಹುಂಜ ಕೂಗಿಧಾಂಗಾತು.

ಹತ್ತು ದಿಕ್ಕಿಗೂ ಕೈ ಮುಗದs ಮುಗಿತೇನಿ
ಆದರೂ ದಾರಿ ಸವಿವಲ್ಲದು.
ಜನ ಮರುಳೊ, ಜಾತ್ರಿ ಮರುಳೋ
ಯಾವುದೂ ಖಾತ್ರಿಯಿಲ್ಲ.
ಅವರಿಗಿರುವಷ್ಟು ಕರುಳು ಮೊದಲ ನಮಗsಇಲ್ಲ.
ಇದ್ದ ಒಬ್ಬ ಮರುಳಯ್ಯನೂ
ಗದ್ದಲದಾಗ ಎಲ್ಲೂ ಕಾಣ್ತಾಯಿಲ್ಲ.

ನೆತ್ತೀ ಮ್ಯಾಲಿನ ಸೂರ್ಯ ತಿರುಗಿ
ಕುತಿಗೀ ಮ್ಯಾಲೆ ಬಂದ.

ಬೆವರೊರಿಸಿಕೊಂಡು ಹಗೂರಕ
ನಾನs ಇನ್ನ ಕೆಳಗಿಳೀಬೇಕು.
ಪೇಟಾ ತೆಗೆದು, ಒಂದು ಲೋಟಾ ನೀರು ಕುಡದು
ಮಂದ್ಯಾಗ ಒಂದಾಗಿ ಬಿಟ್ಟರ
ಆವಾಗ ನಿಶ್ಚಿಂತಿ.
ಅದೇನs ಇದ್ದರೂ
ನಿಮ್ಮ ಪ್ರೀತಿಗೆ ಏನು ಕೊಟ್ಟರೂ
ಎಷ್ಟು ಕೊಟ್ಟರೂ
ಕಡಿಮೀನs ಐತಿ.

ಬೆಳಕು - ಬೆರಗು

೧

ಗಾಳಿ ಬೆರಳುಗಳಿಂದ
ಆ ಮಹಾಕಾಶವಿದೊ
ಸೋಕುತಿದೆ ಈ ನೆಲದ ಜಲದ ಮೈಯ;
ಪುಟ್ಟ ಎದೆ ಜಗದಗಲ
ಬಾಯ್ ಬಿಟ್ಟು ನೋಡುತಿದೆ
ಆಕಾಶಕೊಡ್ಡಿ ಕೈಯ.

೨

ಜಗದ ಪಾತ್ರೆಯ ಹರವು
ತೆರವಾಗಿ ತುಂಬುತಿದೆ
ವಿಶ್ವಗಾನದನಂತ ಸೆಲೆಗಳಿಂದ;
ಗಿರಿ ಕೊಳ್ಳ ಕಾನು ಆ
ಬಾನು, ಅದರೊಳು ನಾನು-
ನೀನು ತಿಂಗಳ ಜೇನು ಹನಿಗಳಂದ.

೩

ನೆಳಲು - ಬೆಳಕಿನ ಹಿಂದೆ
ಸುಳಿವು ಹಿಡಿಯುತ ಬಂದು
ಕಣ್ಣು ಕೊರಳಿಗೆ ತಾಗಿ ಮಿಂಚು -ಬೆರಗು;
ಯಾರು ಹಾಯದ ಹಾದಿ-
ಯಲ್ಲಿ ಕಾಯುತ ನಿಂತೆ
ಮುಂಜಾವೊ ಸಂಜೆಯೊ - ಅರಳು ಮರಳು.

೪

ಬಾನು ಬಗೆ ತೆರೆದು
ಭರವಸೆಯ ನರುಗಂಪಿನಲಿ
ನಗೆ ತೂರಿ ಬರುವಾಗ ಜೀವ ಬೆರಗು;
ಮೋಡ ಮೋಡಗಳಲ್ಲಿ
ಬೆಳಕು -ಬಂಗಾರ ಹುಡಿ
ನೋಡ ನೋಡುತ ಸುರಿಯಿತೆಲ್ಲ ಕಡೆಗು.

ನಮ್ಮ ತಿಮ್ಮಕ್ಕನಿಗೆ

ನಮ್ಮ ತಿಮ್ಮಕ್ಕನಿಗೆ ನೂರಾರು ಮಕ್ಕಳೆಂ-
ದರೆ ಯಾರು ನಂಬುವರು? ಕಲ್ಲು ಒಡೆದು ಪಡೆದ
ಪುಡಿಗಾಸಿಗೆ ಗಂಡನ ಕೂಲಿ ಬೆರೆಸಿ, ಗಂಜಿಯ
ಕುಡಿದು, ಆ ಬಂಜೆ ಎನ್ನುವ ಶಬುದಕಂಜಿದಳೆ?

ಚಿಲುಮೆ ಚಿಮ್ಮಿತು ಎದೆಯ ವಾತ್ಸಲ್ಯ. ಯಾರಿಗೂ
ಹೊಳೆಯಲಾರದ ಕನಸು ಈ ದಲಿತ ದಂಪತಿಗೆ:
ತಮ್ಮೂರ ದಾರಿಯುದ್ದಕ್ಕು ಎರಡೂ ಬದಿಗೆ
ನೆಟ್ಟು ಬೆಳಸಿದರು ಆಲದ ಸಸಿಯ ನೂರಾರು -

ಎಡೆಬಿಡದೆ ಎರೆದು ಪ್ರೀತಿಯ ಧಾರೆ. ಸಾಲು ಮರ-
ಗಳ ನೆರಳಿನಾಚೆ ಅವಳೊಬ್ಬಂಟಿ. ನೋಡುವಳು
ಹಿಂಗದಕ್ಕರತೆಯಲಿ. ಗೌರವ, ಪ್ರಶಸ್ತಿಗಳು
ಸುಸ್ತಾಗಿ ಇಳಿಸಿದವೆ ತಾಯ ಮಡಿಲಿನ ಭಾರ?

ವನಮಹೋತ್ಸವ ನಾಗರಿಕರಬ್ಬರದ ಹೆಸರು
ಸ್ವಯಂಪ್ರೇರಣೆ ಸದ್ದಿರದೆ ಎರೆಯುವ ನೀರು.

ಜೀವನ : ನಾಟಕ

ಕಣ್ಣು ತೆರೆದರೂ ಕಂಡುಕೊಳ್ಳುವ ಇಚ್ಛೆ ಇರ-
ದಾಗ ಬರಿದೆ ತೇಲುವ ಮೋಡ ಗಾಳಿ ದೂಡಿದ
ಹಾಗೆ. ಮಳೆ ಹನಿಗಳುದುರಿ ಬಯಲಾಗೆ ಬಿಸಿಲಿನ
ಹೊಳಪು : ಈಗಿದು ಕನಸೊ ನನಸೋ ಎಂಬ ತೆರ.

ನಡೆದು ಹೋದದ್ದನ್ನು ನೆನೆಸಿಕೊಳ್ಳಲು ನಡುವೆ
ಅಂಕ ಪರದೆ. ಮುಂಬರುವ ಪಾತ್ರಗಳ ಸಿದ್ಧತೆ
ಮರೆಗೆ. ಎಲ್ಲರಿಗು ಪ್ರದರ್ಶನದ ಕಾತರತೆ.
ಪ್ರೇಕ್ಷಕರಿಗಿನಿತಿಲ್ಲ ಹೊರಜಗತ್ತಿನ ಪರಿವೆ.

ನೋಡ ನೋಡುತ್ತ ಮುಗಿದೇ ಬಿಟ್ಟಿತಲ್ಲ ಕಥೆ-
ಯೊಂದಿಗೆ ಆ ಹಾಡು, ನೃತ್ಯ, ನಟನೆ.
ಏಕರಸವಾಗಿದ್ದ ಮನಸಿನ ಜಗದಗಲ ಚಿಂತೆ, ವಿರಸ -
ಆದರೂ ಒಳಗುಳಿದು ಬಿಟ್ಟಿತಾವುದೊ ವ್ಯಥೆ.

ಒಬ್ಬೊಬ್ಬ ವ್ಯಕ್ತಿಯೊಳಗೊಂದು ಅದ್ಭುತ ಲೋಕ
ಕಂಡಾಗ,- ನಾಟಕ ನೋಡಿದ್ದಕ್ಕು ಸಾರ್ಥಕ.

ಡಾ. ಎಚ್.ಟಿ. ಸಾಸನೂರ ಅವರನ್ನು ನೆನೆದು

ಅಭಿಮಾನದದ್ದೂರಿ ಅಭಿನಂದನದ ಸುದ್ದಿ
ಕಿವಿಗೆ ಬಡಿಯುವ ಮೊದಲೆ ಬಡಿಗೆ ತೋರಿಸಿ, ತಲೆಯ
ಕೊಡವಿದಿರಿ. ಅಧ್ಯಯನ - ಅಧ್ಯಾಪನದ ನೆಲೆಯ
ಕಂಡು ಮುದಗೊಂಡು, ಬದುಕಿಗೆ ಅದೆ ಒಂದು ಸಿದ್ಧಿ
ಎನುವಂತೆ ಮಿನುಗಿತ್ತು ಮೊಗದ ಕಳೆ. ಒಳಗೊಂದು -
ಹೊರಗೊಂದು ಇರದೆ ಹೊರಹೊಮ್ಮಿ ಬರುವ ಮಾತಿನ
ಜೊತೆಗೆ ಮುಕ್ತ ನಗೆ. ಬೆಳೆವವರ ಬೆನ್ನು ತಟ್ಟುತ
ಹೊಳಹುಗಾಣಿಸುವ ಬಗೆ: ಅಮೃತದ ಬಿಂದುಬಿಂದು.
'ಗೀತಾಂಜಲಿ'ಯ ಕವಿಯ ಕೃತಿಪುಷ್ಪಗಳ ಬಂಡ-
ನುಂಡು, ಎದೆಯಾಳದಲಿ ಜೇನು ಕಟ್ಟಿದ ಹುಟ್ಟು;
ಸದ್ದಿರದ ಹೆಜ್ಜೆಯಲಿ ಬೆಳಕು ಬರುತಿಹ ಗುಟ್ಟು-
ಬಲ್ಲ ಅನುಭಾವಿಗಳ ಬಟ್ಟೆಯೊಂದೆಳೆ ಹಿಡಿದ.
ಸರಳ ಸಜ್ಜನಿಕೆಗಳ ಗೃಹರಕ್ಷಕರ ದಳಪತಿ
ಪಂಚನದಿಗಳ ನಾಡ ಅನಧಿಕೃತ ಕುಲಪತಿ.

ಮೋಡಗಳು

ಸೂರ್ಯ ಮುಳುಗುವುದನ್ನೆ ದಿಟ್ಟಿಸುತ, ಕಡುಗೆಂಪು
ಹೀರಿ, ಮೆಲ್ಲ ಬೆಟ್ಟದ ಬದಿಗೆ ತನ್ನಷ್ಟಕ್ಕೆ
ಅರಳುತ್ತ, ಮೇಲೇರಿ, ಆಕಾಶದಗಲಕ್ಕೆ
ಮೈಯನೀಡಾಡಿ. ಮಿಂಚಿದ ಮೋಡ: ನಸುಗಪ್ಪು
ಮುಸುಕನೆತ್ತಿ ಬೆಳಕಿನ ಕಚಗುಳಿಯನಿಟ್ಟು, ಅರೆ
ಚಣ ಕಣ್ಣು ಮುಚ್ಚಾಲೆ. ಮಣ್ಣ ಕಣಕಣದಲ್ಲಿ
ಝಣತ್ಕಾರ! ಹನಿಯೊಡೆದ ಸದ್ದಿಗೆ ತಂಗಾಳಿ
ತೀಡಿ, ನೀಗಿತು ಭೂಮಿಯಂತರ್ಜಲದ ಅರಕೆ.
ಅಂತರಿಕ್ಷದಲಿ ಸ್ವಂತ ಸಾಮ್ರಾಜ್ಯ ನಿರ್ಮಿಸಿ
ಸರ್ವತಂತ್ರ ಸ್ವತಂತ್ರವೆನಿಸಿದರು, ಹನಿಯಿರದೆ
ಧ್ವನಿಯಿರದೆ, ಸಾಗಿ ಹೋಗುವುದುಂಟು ಗುರಿಯಿರದೆ-
ಮುಂಗಾರು, ಹಿಂಗಾರು, ಬರಿ ಸಿಂಗಾರವೆನಿಸಿ.
ಮಳೆಗರೆವ ಮೋಡಕ್ಕೆ ಕೊನೆಯಲಿ ನಿರಾಕಾರ.
ವಿವಿಧ ಆಕಾರಗಳಿಗದುವೆ ಸಾಕ್ಷಾತ್ಕಾರ.

ಕವಿಗಳಿಗೆ ಕರೆ

ಕವಿಗೋಷ್ಠಿಯ ಅಧ್ಯಕ್ಷ ಭಾಷಣ ಬಿಗಿದು
ಹೊರಬಿದ್ದಾಗ -
ಒಬ್ಬರ ಮೇಲೊಬ್ಬರು ಕವಿಗಳುಬ್ಬುಬ್ಬಿ
ಅಬ್ಬರದಿಂದ ಓದಿದ ಕವಿತೆಗಳನ್ನೆಲ್ಲ ಕೇಳಿ
ತಬ್ಬಿಬ್ಬಾದ ಸಭ್ಯ ಸಭಿಕನೊಬ್ಬ ದಾರಿಯಲ್ಲಿಯೆ
ನನ್ನ ತಡೆದು ಕೈ ಹಿಡಿದು ಕೇಳಿದ:
'ಕರೆ ಕೊಡಬೇಕಿತ್ತು ನೀವು ಭಾಷಣದಲ್ಲಿ ಕವಿಗಳಿಗೆ,
ಈ ರೀತಿ ಕೊರೆದರೇನು ಗತಿ ನಮ್ಮ ಕಿವಿಗಳಿಗೆ?
ಹಿತವೆನಿಸುತ್ತಿದ್ದಂತೆ ಎಲ್ಲೊ ಒಂದೆರಡು ಸಾಲು,
ಉಳಿದಂತೆ ಇವರು ಮಾಡಿದ್ದು ಮಾತ್ರ
ಇಡೀ ಸಿರಿಗನ್ನಡ ಕೋಶ ಪೋಲು.
ಕೆಲವಕ್ಕಂತು ಇರಲೇ ಇಲ್ಲ ಕೈ-ಕಾಲು;
ಗುಡುಗುಡು ಉರುಳಿಸಿದಂತಿತ್ತು ಗುಂಡುಕಲ್ಲು.
ನಡುನಡುವೆ ತೋಡಿಕೊಳ್ಳುವುದು ಬೇರೆ
ಕವಿತೆಯ ಹೆಸರಲ್ಲಿ ಉಸಿರ ಕಟ್ಟಿಸುವ
ತಂತಮ್ಮ ತೀಟೆ, ತೆವಲು.
ಅಬ್ಬ, ಬಾರಿಸಿದನೊಬ್ಬ ದುರುಗಮುರುಗಿಯ ಡೋಲು-
ಆಗ ಅನಿಸಿತು, ನಮಗೂ ಇರಬೇಕಿತ್ತು
ಕೈಯಲ್ಲೊಂದು ಬಾರುಕೋಲು.
ವಾದ ವಿವಾದಗಳೇನೇ ಇರಲಿ, ಇದ್ದುದರಲ್ಲಿ
ನಮ್ಮ ಕವಯಿತ್ರಿಯರೇ ಸ್ವಲ್ಪ ಮೇಲು.

ಇರಲಿಲ್ಲವೆಂದಲ್ಲ ಒಂದೆರಡು ಹೃದಯ ತಟ್ಟಿದ ಪದ
ಹದಗೊಂಡು ಮನವನರಳಿಸಿ ಹರಡಿದ ಸುಗಂಧ.

ಅದೆಲ್ಲೋ ಬಾನ ಮೂಲೆಯಲಿ ಮಿಂಚಿ ಮಾಯವಾದಂತಿತ್ತು-
ಆಮೇಲೆ ಎಲ್ಲ ಕತ್ತಲೇ.
ಚುಟುಕು ಚುಟುಕಾಗಿ ಹಾರಾಡಿದ್ದು
ಮಿಣುಕು ಹುಳುಗಳೇ.

ಕರೆ ಕೊಡುವ ಅವರ ಪ್ರಶ್ನೆಗೆ ನಿದಾನ ಉತ್ತರಿಸಿದೆ:
'ಅಂತರಂಗದ ಕರೆಯು ಬರುವವರೆಗೂ ಕಾದು
ಆಮೇಲೆ ಬರೆದರೆ ಅವರಿಗೂ ಮರ್ಯಾದೆ'.
ಈ ತಗಾದೆಯ ನಡುವೆ ಬಾಯಿ ಹಾಕಿದನೊಬ್ಬ:
'ಕರೆ ಕೊಡುವುದಕ್ಕಿಂತ ಬರೆ ಕೊಡುವುದೆ ಲೇಸು,
ತ್ವರೆ ಮಾಡಿ' ಎಂದವನೆ ಗುಂಪಿನಲಿ
ಮರೆಯಾಗಿಬಿಟ್ಟ.

ಅಚ್ಚ ಪ್ರತಿಭೆಯ ಹುಚ್ಚು*

ಸ್ವೋಪಜ್ಞತೆಯ ರಂಗುದುಟಿ ನಡುವೆ ಮುಗ್ಧತೆಯ
ಮುಗುಳು ನಗೆ. ಕೊಂಕಿರದ ನೋಟ. ಕಾವ್ಯಕ್ಕೆ ಕಂ -
ಬನಿಗರೆದ ಅಜ್ಜಿ ಅಂಬಕ್ಕನೇ ಮೈತುಂಬ.
ಅಂಬಿಕಾತನಯ 'ಕನಸಿಗ'ನ ಚಿತ್ತದ ಬಿತ್ತ.
ತಲೆ ಮೇಲೆ ಗಳಗನಾಥರ ಕೈ. ಕಿವಿವೆರೆಗೆ
ಸೂಕ್ಷ್ಮ ಸಂಗೀತ ಶ್ರುತಿ. ಯಾರಪ್ಪನಿಗೂ ಎಟುಕ -
ದಿಹ ಹರಪ್ಪಕು ಚಾಚಿದ ಕೈ; ವಿಲಕ್ಷಣ ಎರಕ.
ಸೇವೆ - ಶಾಂತಿಯ ನಾವೆ: ಹುಟ್ಟು ಹಾಕದ ವ್ಯಥೆ.
ಪೂರ್ವದ ಸೂರ್ಯೋದಯವ ಕಾಣದೆ, ಪಶ್ಚಿಮದ
ಹಾದಿ ಹಿಡಿಸಿದವರಿಗೆ ಇವರು ನೂರುಗಾವುದ
ದೂರ. ಹತ್ತಿರದ ಮಹತ್ತಿಗೆ ಅತ್ಯುತ್ಸಾಹ.
ವಿಮರ್ಶೆಗೆ ಮೊದಲು ಸಾಹಿತ್ಯ - ಅಭಿರುಚಿ ವಾದ.
ಅವ್ವ - ಮಾಯಿ - ಅವಧೇಶ್ವರಿ - ಯೇಟ್ಸ್ - ಅವಧೂತ:
ಅಚ್ಚಪ್ರತಿಭೆಯ ಹುಚ್ಚಿಗಿದೊ ಈ ಪುಷ್ಪಗುಚ್ಛ.

---

* ಡಾ. ಶಂಕರ ಮೊಖಾಶಿ ಪುಣೇಕರ ಅವರಿಗೆ

ಡಾ. ಅಂಬೇಡಕರ ಕುರಿತು

೧

ಎಷ್ಟೊಂದು ಕರುಳು ಹಿಂಡುವ ಇರುಳು
ಯುಗ ಯುಗಗಳಿಂದ!
ಹಗಲನ್ನೆ ಕಾಣದ
ಕರಾಳ ಕತ್ತಲೆಯ ಲೋಕದಲಿ
ತಳಮಳಗೊಂಡ ದನಿಯಿರದ ಕೊರಳು.
ಹೇಗೊ ಕೆಸರಿಂದ ಕೊಸರಿ, ಉಸಿರು ಬಿಗಿ ಹಿಡಿದು
ಬಸಿರು ಹೊಸೆಯುತ್ತ ಕೈಚಾಚಿದರೂ
ದೊರೆಯಲಾರದ ಸ್ಪರ್ಶ.

ನಡು ಬಾಗಿ, ಕೊಳಚೆಗುಡಿಸಿ, ದೂರ
ಮೂಲೆಯಲಿ ಕುಕ್ಕರು ಕೂತು
ಕೈಯೊಡ್ಡಿ, ಕಣ್ಣು ಪಿಳುಕಿಸುವ
ಧೂಮ, ಧೂಳ, ಕಾಳ, ದುರುಗ, ಕೊರಗ...

ಕೆರವು ಹೊಲಿದು ಕಾಲಿಗೆ ತೊಡಿಸಿ
ಬರಿಗಾಲಿನಲ್ಲಿ ನೆಲ ತುಳಿದು
ತಲೆ ಮೇಲೆ
ಹೊರಬಾರುದುದ ಹೊತ್ತು -
ಮೇಲಿನವರ ಕರ್ಮದ ಭಾರ,
ಎಲ್ಲು ನೆಲೆಗಾಣದೆಯೆ, ಕಣ್‌ಕಪ್ಪಡಿಯಂತೆ
ಗೋಡೆಗೋಡೆಗೆ ಹಾಯ್ದು, ನೆತ್ತರು ಬಸಿಯುವಾಗ
ಸನಾತನ ಧರ್ಮ ಧಿಕ್ಕರಿಸಿ ಚಿಮ್ಮಿತು
ವಿನೂತನ ಕಿರಣ.

ಕೇರಿಕೇರಿಯ ಕಪ್ಪು ಹಣತೆಗಳಲ್ಲಿ
ಸ್ವಾಭಿಮಾನವು ಹೊಸೆದ ಬತ್ತಿಯಾಗಿ
ಕಣ್ಣು ಕಿಡಿಸೂಸಿ, ಮಾರಿಮಸಣಿಗಳು ಕೂಡ
ಮೆರವಣಿಗೆಯಲ್ಲಿ ಘೋಷಣೆ ಕೂಗು:
ಹುಟ್ಟಿದವರೆಲ್ಲರೂ ಸಮಾನ ಹಕ್ಕುಳ್ಳವರು
ಬಾಳಿ ಬದುಕತಕ್ಕವರು.

೨

ಹುಟ್ಟಿದಾಗಲೆ ಮುತ್ತಿ ಮುಗಿಬಿದ್ದ ಮೋಡಗಳ
ತೂರಿ ಚೆಂಡಾಡಿ, ಹೊರಬಂದೆ ನಿಗಿನಿಗಿ ಕೆಂಡವಾಗಿ;
ಧರ್ಮಕರ್ಮದ ಹೆಸರಿನಲಿ ಅಧರ್ಮವನು ಬಿತ್ತಿ ಬೆಳೆದವರ
ನೆತ್ತಿಯ ಮೇಲೆ ತೂಗು - ಖಡ್ಗವಾಗಿ.
ಬಿದ್ದವರನೆದ್ದು ನಿಲ್ಲಿಸಿ, ಹದ್ದು ಮೀರಿದ ಶೋಷಣೆಗೆ
ಅರೆದ ಮದ್ದಾಗಿ, ಖುದ್ದಾಗಿ ನಡೆದೆ
ರಾಜಬೀದಿಯಲಿ ಮದ್ದಾನೆಯಾಗಿ.

ಭರತಖಂಡದ ಖಂಡ, ಮಾಂಸ, ಗುಂಡಿಗೆಯ
ಬಿಸಿರಕ್ತ ಒಂದೆ; ಆದರೂ 'ಹಿಂದು' - ಮುಂದೆ.
'ವರ್ಣ'ಗಳ ವ್ರಣಕೆ ಶಸ್ತ್ರಚಿಕಿತ್ಸೆಯ ಮಾಡಿ
ಇಡಿಯ ಚರ್ಮಕ್ಕೆ ಹಾಕಿದೆ ತಕ್ಕ ಹೊಲಿಗೆ.
ಮುಟ್ಟಿಸಿಕೊಳ್ಳದವರ ಮುಟ್ಟಿ, ಮೈದಡವಿ
ಹೃದಯ ದೇಗುಲದ ಮೆಟ್ಟಿಲು ದಾಟಿ
ದೇವರಿಗೆ ಭೆಟ್ಟಿ ಮಾಡಿಸಿದೆ.
ಅವಕಾಶ ಒದಗಿಸದೆ, ಬರಿಯ ಆಕಾಶ ತೋರುತ ಬಂದ
ಆಷಾಢ ಭೂತಿಗಳನೆತ್ತಿ ಬೀಸಾಡಿದೆ.
'ದಲಿತ ಜನತೆಗೆ ಮಾತೃಭೂಮಿ ಎಲ್ಲಿದೆ?' ಎಂಬ

ಆರ್ತಭಾವದ ಪ್ರಶ್ನೆ. ಗಾಂಧಿಯಂಥ ಮಾನವ ಸಂತ-
ನೆದುರು ಹಾಕಿಕೊಂಡಾಗಲೂ
ಹೃದಯಾದೌದಾರ್ಯಕ್ಕೆ ಮಾರುವೋದೆ.
ಆದಿಗ್ರಂಥಗಳ, ಮತ-ಪಂಥಗಳ ಧೂಳು ಕೊಡವಿ
ಅಕ್ಷರಸ್ಥರ ಆತ್ಮವಂಚನೆಯ ಸಂಚು
ಬಯಲಿಗೆಳೆದೆ.
ಬಲಗೈಯ ತೋರು ಬೆರಳೆತ್ತಿ, ಭವಿಷ್ಯದ
ತಾರೆ ತೋರಿಸಿ, ಹಣೆ ಬರೆಹ ತಿದ್ದಿ ಬರೆದೆ -
ಸಮಾನತೆಯ ಸಂವಿಧಾನ.
ಕರುಣೆ ಕಂಡರಿಸಿರುವ ಬುದ್ಧಸ್ಮಿತಕೆ ಬಾಗಿ
ಬೆಳಗಿದೆ ಮಾನವೀಯತೆಗೊಂದು ಜ್ಯೋತಿಯಾಗಿ.

ಬಾಬಾ, ಬಂದು ನಿಂತಿದ್ದಾರೆ ಇವರು
ನಿನ್ನ ಹೆಸರನು ಹೊತ್ತ ಬೀದಿ, ವರ್ತುಲಗಳಲ್ಲಿ.
ಎತ್ತರದ ಪ್ರತಿಮೆಗಳ ನೆರಳಿನಲ್ಲಿ -
ಹತ್ತಾರು ಬಣಗಳಲಿ ಸಿಡಿದು, ಸಿಡಿಮಿಡಿಗೊಂಡು
ಕುಳಿತ ಬಂಡಿಯ ಕೀಲು ಕಳಚದಂತೆ
ಒಟ್ಟಾಗಿ ಬಂದು ತಳಿರು ತೋರಣ ಕಟ್ಟಿ
ನಡೆಯಬೇಕಿದೆ ಮುಂದೆ -
ತಮ್ಮ ಕಾಲಮೇಲೆಯೆ ತಾವು ನಿಂತು, ಸೋಲರಿಯದ
ನಿನ್ನ ಹಾದಿಯಲಿ.

ಮುಗಿಯದ ಹಾಡು *

ಏಳು ಹತ್ತಲೆ ಎಷ್ಟು? ಮಗ್ಗಿ ಒಪ್ಪಿಸಿ ಆಗ
ನಾ ಪಾಸಾಗಿದ್ದೆ. ಮುಂದಿನ ಇಯತ್ತೆಗೆ ಬಿದ್ದೆ.
ಸಾವಕಾಶ ಎದ್ದೆ. ಸಿಕ್ಕಿದ್ದು ಓದಿದೆ, ಬರೆದೆ.
ದಕ್ಕಿದ್ದು ಅಷ್ಟೊ ಇಷ್ಟೋ. ಮಿಕ್ಕಿದ್ದು ಈಗ
ಈ ಬದುಕು, ಈ ಬಾಳೆ, ಚಿರಂತನ ಮಂಥನ.
ಅಂತsನ ಈ ಹೊತ್ತಿನೊಳಗ ನಾವೆಲ್ಲ ಹೀಂಗ
ಕೂಡೀವೆಲ್ಲ: ಮರೆತು ಹಿಂದಿನೆಲ್ಲ ಜಂಜಾಟ-
ಬೇವು-ಬೆಲ್ಲ. ಇದೂ ಒಂದು ಹೊಸ ಯುಗಾದೀನ.s
ಬಚ್ಚಬಾಯಿಲೆ ನಕ್ಕೋತ ಹಣ್ಣೆಲಿ ಹಾಂಗ
ಗಾಳಿಗೆತೇಲ್ತ. ಚಿಗುರು - ಮಗ್ಗಿ ಹಿಗ್ಗಿನ್ಯಾಗ
ನೆಲಕಿಳಿದು, ಮುಗಿಲಿಗೆ ಕೈಮುಗಿತಾವ. ಯೋಗ
ಕೂಡಿಬಂದರ ಪಾಡು; ಹಾಡೂ ಮುಗಿಯೂದಿಲ್ಲ-
ಅವೂ ನಿನ್ನ ಬಿಡೂದಿಲ್ಲ. ಮೊದಲs ಸೂಕ್ಷ್ಮ ಪ್ರಕೃತಿ
ಈ ಜಗತ್ತು ಎತ್ತಿ ಹಿಡಿತಲ್ಲ, ಎಂಥ ಸುಕೃತಿ!

---

* ಎಪ್ಪತ್ತರ ಹುಟ್ಟುಹಬ್ಬದ ಸಂದರ್ಭ

ಅತ್ತಿ ಕೊಳ್ಳದಲ್ಲಿ ಸೂರ್ಯ

ಬೇಂದ್ರೆ 'ಬೆಳಗಿ'ನ ಅತ್ತಿ ಕೊಳ್ಳದಲ್ಲಿ ಸಾವಿರ
ಮಂದಿ ಬಡಬಗ್ಗರು ಮನೆಕಟ್ಟಿ, ಅಲ್ಲಲ್ಲಿ
ಗುಡಿಕಟ್ಟಿ, ಸುತ್ತು ಗುಡ್ಡಗಳ ಇಳಿಜಾರಿನಲ್ಲಿ
ಸಂಸಾರ ಹೂಡಿ, ದಸದಸ ತೇಕಿ ಮೇಲೇರ-
ಬಯಸುವ ಬಸ್ಸಿನೊಡನೆ ಸೆಣಸಾಡಿ- ಸಂಚಾರ.
ಮೂಡಲ ಮನೆಯ ಬಾಗಿಲ ತೆರೆದು, ಸೂರ್ಯ ಹಣಕಿ-
ದರೆ, ನಳದಲ್ಲಿ ಮುತ್ತಿನ ಹನಿಗೆ ಕೊಡಗಳು ಬಾಕಿ.
ಗಡಬಡಿಸಿ ಶ್ರಾವಣದ ಮೋಡಗಳ ಸಮಾಚಾರ
ಕೇಳಿ, ನಡುನೆತ್ತಿಗೈತಂದು, ಕೊಳಚೆ ಕೊಂಪೆಗೆ
ಮುಖವ ಸಿಂಡರಿಸಿ, ಹಿಂದಿನ ಗಂಧರ್ವ ಸೀಮೆ
ನೆನೆದು, ಗಿಡಗಂಟೆಗಳ ಕೊರಳ ಹಾಡಿನ ಭ್ರಮೆ -
ಯಲ್ಲಿ ಸಂಜೆಗೆ ಬಳಿದ ರಾಗ ಮುಗಿಲ ಮಾರಿಗೆ.
ಕಾಂಕ್ರೀಟು ಕಾಡಿನಲಿ ಕಣ್ಗೆ ಬಡಿಯುವ ಬಣ್ಣ
ಅರಿಯದಳವಿಗೆ ಟೀವಿಯಲಿ ಮೈದೋರಿತಣ್ಣ.

ಅಗಲಿದ ಲೇಖಕ ಮಿತ್ರರನ್ನು ನೆನೆದು

ಇಲ್ಲಿದ್ದು, ದೇಹಕ್ಕೆ ಮೀರಿ ಮನಸನು ತೆಯ್ದು
ಕನಸಿನೊಳ ಹೊಕ್ಕು ಹೊರಬಿದ್ದು ಅಕ್ಷರವಾಗಿ
ನಕ್ಷತ್ರಗಳ ಹಿಡಿದು, ನಾಡಿ ಮಿಡಿವಷ್ಟರಲಿ
ಬಾನ ಮೂಲೆಗೆ ಬಾಲ ಬೀಸುವ ಧೂಮಕೇತು!
ಹಗಲಿನುದ್ಯೋಗಕ್ಕೆ ಹೆಗಲುಗೊಟ್ಟಿರುವ ಜಗ:
ಒಳಗೊಳಗೆ ದಿಗಿಲು. ಮುಗಿಲು ಮೆಲ್ಲಗೆ ತೇಲಿ
ಚೆಲ್ಲಿದರೆ ನಾಲ್ಕು ಹನಿ, ಮತ್ತೆ ಚಿಗಿಯುವ ಬೇಲಿ.
ಮತ್ತ ಮಧುಮಾಸದಲಿ ಗಸ್ತು ತಿರುಗುವ ಭೃಂಗ.
ಜೀವನ ಪ್ರವಾಹಕ್ಕೆ ಯಾವ ಗತಿ? ಎಲ್ಲೊ ಜಲ-
ಪಾತ; ತಿರುಗಣಿಮಡುವನೊಡ ಹಾಯ್ದು, ಎರಡು ದಡ
ಧಿಕ್ಕರಿಸಿ ಹರಿದು, ತಿರುಗಿ ಸಮಪಾತಳಿಯ ಕಂಡ
ದೈತ್ಯಶಕ್ತಿಗೆ ಕೊನೆಗು ನಿರ್ಲಕ್ಷ್ಯತೆಯೆ ಮೂಲ-
ವಾಗುವದೆಂಥ ವಿಪರೀತ ! ಅರ್ಥಕೆ ಅಪಾರ್ಥ,
ಹೀಗೆಯೇ ಹುಡುಕುತ್ತ, ತಡಕುತ್ತ, ಮಿಡುಕುತ್ತ....

'ಮಹಾಮಾರ್ಗ'ದ ಪಥಿಕ

ಅಪರಾತ್ರಿಯಲಿ ದೀಪ ಉರಿಸುವೇಕಾಂತ ಪಥ-
ನಡಿಗೆಯಲಿ, ದುಡಿಮೆಯಲಿ ಅಡೆತಡೆಯಿರದ ವೇಗ
ಒಳದಾರಿ ಹಿಡಿಯದೆ 'ಮಾರ್ಗ'ದಲಿ ಸಾಗುವ ಛಲ.
ಹತ್ತು ಕ್ಷೇತ್ರಗಳ ತೆಕ್ಕೆ ಬಡಿದು ಶೋಧಿಸಿ ತೆಗೆದ
ವಸ್ತುವಿಗೆ ಜ್ಞಾನದ ಶಿಸ್ತು; ಸೃಜನದುಸಿರಾಟ.
ರೂಢಿಗೊಗ್ಗದ, ಹಿಂಸೆಗೂ ಬಗ್ಗದ ವಿಭಿನ್ನ
ವಿಶ್ಲೇಷಣೆಯ ಧಾಟಿ. ತಪ್ಪಿ ದುಡುಕುವ ಮುನ್ನ
ಒಪ್ಪಿ ಅರ್ಧ ವಿರಾಮ. ಇಲ್ಲಿಲ್ಲ ದೊಂಬರಾಟ.
ವಿವಿಧ ಕೋನದ ಗ್ರಹಿಕೆ: ಸಹೃದಯತೆಯ ಕಾಣ್ಕೆ.
ಸೋದನ ದೀವಿಗೆಯಿಂದ ಹೊಳೆಯುವ ವಿಮರ್ಶೆ
ಹೊಸಬಗೆಯ ಸಂವಾದಕ್ಕೆ ತಗುವ ನಿಷ್ಕರ್ಷೆ.
ಸಲ್ಲಲಾರದು ಎಲ್ಲಿಯು ಈರ್ಷೆ, ಈರಾಟಿಕೆ.
ಬಂಡೆ ಮೃದುಗೊಳಿಸಿ ಹೊಸಮೂರ್ತಿ ಕೆತ್ತುವ ತವಕ
ತುಂಗಭದ್ರೆಗೆ ತುಡಿವ ಮಹಾಮಾರ್ಗದ ಪಥಿಕ.

ಸಂದರ್ಭ : ಡಾ ಎಂ.ಎಂ. ಕಲಬುರ್ಗಿಯವರಿಗೆ ಅರುವತ್ತರ ಅಭಿನಂದನ

ಕವಿಯ ಧನ್ಯತೆ

ಮನುಷ್ಯರಿಗಂಟಿಯೂ ಅಂಟಿಕೊಳ್ಳದೆ, ಕಿಟಕಿ -
ಯಲಿ ಕುಳಿತು, ತಂಟೆ ತೆಗೆಯುತ್ತ, ಗೂಡು ಕಟ್ಟಲು
ಹೊಂಚಿ, ಗಂಟೆಗಟ್ಟಲೆ ಚಿಂವ್ ಚಿಂವ್ ಗುಟ್ಟಿ, ಬಯಲು -
ಆಲಯವ ನೊಂದುಗೂಡಿಸುತಿದ್ದ ಗುಬ್ಬಚ್ಚಿ
ಒಮ್ಮೆಲೇ ನಾಪತ್ತೆ. ಏನಾದವೇನು ಕತೆ!
ಬಾಲ್ಯದಲಿ ನಮ್ಮೊಡನೆ ಬೆಳೆದ ಇವುಗಳ ಕತೆಗೆ
ಇನ್ನು ರೆಕ್ಕೆಗಳಿಲ್ಲ - ಪಕ್ಕದ ಗಿಡದ ತುದಿಗೆ
ಹಾರಿ ಹಾಡುವ ಹಕ್ಕಿಗಿಲ್ಲ ಇಂತಹ ಮಮತೆ.
ಇತ್ತೀಚೆ ಮುಂಬಯಿಯಲ್ಲಿ ಮಹಡಿಮನೆ ಕಿಟಕಿ
ಬಳಿ ಕುಳಿತಾಗ: ಮೇಲೆ ವಿಮಾನ, ಕೆಳಗೆ ಗುಬ್ಬಿ-
ಗಳ ಚಿಲಿಪಿಲಿ ಕಿವಿಗೆ ಬಿದ್ದು ನನ್ನ ಬಡಿದೆಬ್ಬಿ -
ಸಿತು; ಇಂಥ ಬಿಡುವಿರದ ನಗರದಲಿ ಈ ಗಿರಾಕಿ!
ಅಲ್ಲಿ ಊರಿನಲಿ ಕಣ್ಮರೆಯಾದ ಪುಟ್ಟ ಜೀವಿ
ಇಲ್ಲಿ ಬದುಕಿವೆಯಲ್ಲ, ಧನ್ಯನಾದನು ಕವಿ.

ಈ ಕ್ಷಣದ ಸುತ್ತು . . .

ಈ ಕ್ಷಣದ ಸುತ್ತು ತಿರುಗುತ್ತಿವೆ ಅಕ್ಷೋಹಿಣಿ
ಕಣಗಳು : ನೆನಪ - ಹೂಬಿಸಿಲ ಕೋಲಿಗೆ ತಾಗಿ
ಸಿಕ್ಕು ಸಿಗದಂತೆ ಗಾಳಿಯಲಿ ಕಣ್ಮರೆಯಾಗಿ.
ಹಾರಿಬಂದರೂ ಬರಬಹುದು ದೂರದ ಕ್ಷಿಪಣಿ.
ಒಂದೆಡೆ ಪಶ್ಚಾತ್ತಾಪ, ಮತ್ತೊಂದೆಡೆ ಚಪಲ.
ಏರುತ್ತಿರುವ ಒತ್ತಡ ಕೆಳಗಿಳಿಯದ್ದಕ್ಕೆ
ತಲ್ಲಣದಲಿ ತನ್ನ ತಾನು ತಿಳಿಯುದ್ದಕ್ಕೆ
ಶಿಥಿಲ ಸಂಬಂಧಗಳ ತೀವ್ರ ಗೊಂದಲ -ತುಮುಲ.
ಉತ್ತರದ ಚಳಿಗೆ ಕಾಡು ನಾಡೆಲ್ಲ ತತ್ತರ.
ಸಂಕ್ರಮಣ ಕಾಲ, ಮುಗುಳೊಡೆದ ಮಾಮರ - ಕಂಪು
ಮಣ್ಣಗೋಡೆಗೆ ತಿಂಗಳನ ಅಂಗೈ ಛಾಪು
ಮುಪ್ಪಿಗೊಪ್ಪಿಸಿ ಬಾಲ್ಯ -ಯೌವನದ ಸಂಭಾರ.
ಚಿಗುರು - ಚಿಣ್ಣರ ಹೆಗಲಿಗೆತ್ತಿ ಬಂದಿಹ ಚೈತ್ರ
ನೆಲ-ಮುಗಿಲ ನೇದಿರುವ ಬಯಲ ಬದುಕಿನ ಸೂತ್ರ.

ನಗರ

ಬಂದು ಬಂದುದನೆಲ್ಲ ಬರಸೆಳೆದು, ತನ್ನೊಡಲ
ಹಿಗ್ಗಿಸುತ, ಕಿಕ್ಕಿರಿದ ಚಕ್ರಪಥದಲಿ ಸಾಗಿ
ಅವರವರ ದಾರಿಯವರಿಗೆ ಬಿಟ್ಟು, ಹಿಂತಿರುಗಿ
ಬರಲು ಪುರಸತ್ತಿರದೆ ಸುತ್ತಿಕೊಂಡಿದೆ ಜಾಲ.

ನಿತ್ಯ ಬದುಕಿನ ಮುಖದಿ ಸುಖದುಃಖದಾವೇಗ
ಹತ್ತಿಟ್ಟು, ಮುತ್ತಿಗ್ಗಾತೊರೆವ ಕಾತರತೆ.
ಸಂಜೆಗೆಂಪಿಗೆ ಅಂಜದಪಘಾತ, ಅಸ್ಥಿರತೆ;
ಸುಸ್ತು ಹೊಡೆದಿರುಳಿಗೆ ಸ್ವಸ್ತಿ - ಕನಸಿಗೆ ಸುರಂಗ.

ನೆನಪಾದಾಗ ಪುಟಿವ ಕಾರಂಜಿ; ಕೂಟಿನಲಿ
ಸಾಕ್ಷೀ ಪ್ರತಿಮೆ. ಅಸ್ತಿತ್ವವಿರದ ರಸ್ತೆಬದಿ
ವಾಹನ ಡೋಲಾಯಮಾನ. ಹಿಂದಿನೊತ್ತಡದಿ
ತತ್ತರಿಸಿ ಮುಂದೆ ನುಗ್ಗುವ ದಾರಿ ನೂರು ಮೈಲಿ.

ನಾಗರಿಕತೆಗನಿವಾರ್ಯ ವೇಗದಾಕರ್ಷಣೆ-
ಕದಡದಿರಲೇಕಾಂತ : ಸೃಷ್ಟಿಮೂಲದ ರಾಣೆ.

'ಪ್ರಮಾಥಿ'ಯ ಪ್ರಾರಬ್ಧ

೧

ಹಬ್ಬಕ್ಕೆ ಎಣ್ಣೆ ಹಚ್ಚಿ ಎರೆದಂತೆ ಚಿಗುರಿ, ಮಿರಿಮಿರಿ
ಮಿಂಚುವಶೋಕವೃಕ್ಷದ ನೆತ್ತಿಯಲ್ಲಿ
ಕುಳಿತ ಬಣ್ಣದ ಹಕ್ಕಿ-
ಗುಡಿಪಾದ್ಯದ ಗಿಂಡಿ:
ಸೃಷ್ಟಿಗೂ ದೃಷ್ಟಿಗೂ ನಡುವೆ ಸಮದಂಡಿ.

ಉದುರಿದೆಲೆಗಳ ರಾಶಿ
ಘಾಸಿಯಾಗದ ಹಾಗೆ ಗುಡಿಸಿ
ಗುಂಪಿ ಮಾಡಿದೆ.
ಯಾಕೊ, ಬೆಂಕಿ ಹಚ್ಚಲು ಮನಸ್ಸಾಗಲಿಲ್ಲ.
ಮೊನ್ನೆ ಮೊನ್ನೆ ಕೊಳಚೆ - ಕೊಂಪೆಗೆ ಬೆಂಕಿ ಬಿದ್ದು
ಸುಟ್ಟು ಕರಕಾದ ದೇಹಗಳೆ ಇನ್ನೂ ಕಣ್ಣ ಮುಂದೆ.

ಕಂಪೌಂಡು ಗೋಡೆಯ ಮೇಲೆ
ನಿರ್ಭಯವಾಗಿ ಓಡಾಡಿ, ಬಾಲವೆತ್ತಿ
ಸರಸರ ತೆಂಗಿನ ಮರವೇರಿ
'ಚೀಂಕ್ ಚೀಂಕ್' ಎಂದು ತನ್ನ ಸ್ವಾತಂತ್ರ್ಯವನು
ಸಾರಿ ಹೇಳಿತು ಅಳಿಲು.
ಅದಕ್ಕೆ ಬಿದ್ದಂತಿಲ್ಲ ಇನ್ನೂ ಭಯೋತ್ಪಾದಕರ ನೆರಳು.
ಎಳನೀರಿನೊಳಗೆ ಬಲಿಯ ತೊಡಗಿದೆ
ತೆಂಗಿನಕಾಯಿ ತಿಳಲು.

ಮಾವಿನ ಮರದಲ್ಲಿ ತೂಗಾಡುತ್ತಿದ್ದ ಗೊಂಚಲಿನಿಂದ
ಒಂದೇ ಒಂದು ಕಾಯಿ ಹರಿದು
ಚಟ್ಟನೆಂದು ಇವಳಿಗೆ ಕೊಟ್ಟೆ.
ತಟ್ಟನೆ ಯಾವುದೋ ಮೂಲೆಯಿಂದ
ಕೋಗಿಲೆಯೊಂದು ಕೂಗಿ
ಬೇರೊಂದು ಮರಕ್ಕೆ ಹಾರಿ ಹೋಯ್ತು.

೨

ತಲೆಬಾಗಿಲಲ್ಲಿ ತೋರಣದ ಸ್ವಾಗತ:
'ಪ್ರಮಾಥಿ'ಯೊ, ಪ್ರಮಾದವೊ, ಪ್ರಮೋದವೊ
ಸಂವತ್ಸರಕ್ಕೆ ಯಾವ ಹೆಸರಾದರೇನು
ಮತ್ಸರವಿರದಿದ್ದರೆ ಆಯಿತು.
ಮಲ್ಲಿಗೆಯ ಕಂಪು, ಬೇವಿಗೂ ಹೂವಿನ ಸೊಂಪು.
ಮಧು ಮಾಲತಿಗೆ ಮೈತುಂಬ ಹೂಗೊಂಚಲು:
ನಸುಕಿನಲ್ಲಿಯೇ ಸಿದ್ಧ ಪರಿಮಳವ ಹಂಚಲು.

ನಳದಲ್ಲಿ ನೀರು ಬಂದಾಗ
ನೀರು ತುಂಬುವ ಹಬ್ಬ;
ಲೈಟು ಬಂದಾಗ ದೀಪಾವಳಿ.
ಬೇರೇನಾದರೂ ಉಪಾಯವಿದ್ದರೆ ನೀವೇ ಹೇಳಿ.
(ಉಂಡದ್ದೆ ಉಗಾದಿ, ಮಿಂದದ್ದೆ ದೀಪಾವಳಿ)
ಹೋಗಲಿ ಬಿಡಿ, ಇಲ್ಲಿ ನೋಡಿ-
ಹೇಗೆ ಬದುಕುತ್ತಿದೆಯೊ ಈ ಹಂದಿಗಳ ಹಿಂಡು,
ನಗರಸಭೆಯ ಕೃಪೆ: ಕಸದ ತೊಟ್ಟಿಯು ತುಂಬಿ
ಹೊರಚೆಲ್ಲಿ ಹಾರಾಡುತ್ತಿವೆ ಪ್ಲಾಸ್ಟಿಕ್ ಚೀಲಗಳ ದಂಡು.

ಇದನ್ನೆಲ್ಲ ಕಂಡು ಕಂಡೂ
ನಾವು ಸುಮ್ಮನಿದ್ದೇವೆ; ಯಾಕೆಂದರೆ
ಇದರಲ್ಲಿ ನಮ್ಮದೂ ಇದೆ ಅರ್ಧಪಾಲು.

೩

ಯುಗಾದಿಯ ಶುಭಾಶಯ ಕೋರುತ್ತ
ಆಗಲೇ ಸುರುವಾಯ್ತು ಬಿಸಿಲಿನ ಝಳ.
ಆಕಾಶದಲ್ಲಿ ಮೋಡದ ಸುಳಿವಿಲ್ಲ
ಗಾಳಿಯ ಕೈಯಲ್ಲಿ ಬೀಸಣಿಕೆಯಿಲ್ಲ.
ಇವತ್ತೊಂದು ದಿನವಾದರೂ ನಾನು
ದಿನಪತ್ರಿಕೆ ತೆರೆಯುವುದಿಲ್ಲ.
ಬನ್ನಿ ಒಳಗೆ ಕರೆಯುತ್ತಿದ್ದಾರೆ-
ನಿಮಗೇನು ಚಹ? ಅಥವಾ ಬೇವು -ಬೆಲ್ಲ?

ಶ್ರೀಗುರು ತೋಂಟದಾರ್ಯ

ಎತ್ತಣ ಮಾಮರ, ಎತ್ತಣ ಹುತ್ತ? ತೋಂಟದಲಿ
ಅಲ್ಲಮನಂತೆ ಮಾಟ. ಶಿವಯೋಗ ನಿದ್ರೆಯಿಂ-
ದೆದ್ದ ಸರ್ವಾಂಗ : ಓಂ ಬಸವಲಿಂಗ. ಅರ್ತಿಯಿಂ
ಶರಣ ಪರಂಪರೆ ಧೇನು ಕರೆದ ವಚನಾಮೃತದಿ
ಷಟ್‌ಸ್ಥಲಜ್ಞಾನ ಸಾರ: ಸ್ವಸ್ವರೂಪ ದರ್ಶನ-
ಕೆತ್ತಿ ಹಿಡಿದ ಕನ್ನಡಿ ಹೊಳೆದು ಹತ್ತೂ ಕಡೆಗೆ
ಬಯಲ ಸಂಭ್ರಮದ, ತರ್ಕ ಮೀರಿದನುಭಾವಕ್ಕೆ
ತಕ್ಕ ಮಾನವ ಧರ್ಮ ತತ್ತ್ವದನುಸಂಧಾನ.
ಏಳು ನೂರೊಂದು ವಿರತರವಿರತಾಂದೋಲನ.
ನಾಡಿನುದ್ದಗಲಕ್ಕು ಜ್ಞಾನ-ಕ್ರಿಯೆ ಸಂಚರಿಸಿ
ಸ್ಫಟಿಕ ಘಟದೊಳೆತ್ತಿದ ಜ್ಯೋತಿ ಪ್ರತಿಬಿಂಬಿಸಿ
ಪುನರುಜ್ಜೀವನ: ಜನದ ಜಂಗಮ ನಿರಂಜನ.
ಇಂಥ ಗುರುವಿಗೆ ಎಂಥ ಶಿಷ್ಯ ಶ್ರೇಷ್ಠರ ಒಸಗೆ!
ಯುಗವು ಕಾತರಿಸಿತ್ತು 'ಶೂನ್ಯಸಂಪಾದನೆ'ಗೆ.

ಶ್ರೀ ಸಾಮಾನ್ಯರ ಸಿದ್ಧಲಿಂಗ *

ಸೂರ್ಯನಿಗು ಕಿರಣಕ್ಕು ಭೇದವಿಲ್ಲದ ಹಾಗೆ
ಶತಮಾನಗಳ ಮೀಟಿದಂತರಂಗದ ಸ್ಫೂರ್ತಿ:
ಬಸವ ಕಾಯಕ ದೀಕ್ಷೆ ಪಡೆದ ಸಾತ್ವಿಕ ಮೂರ್ತಿ
ಮಠ-ಪೀಠದಂಗಳವ ಗುಡಿಸಿ, ತನ್ನೊಳ ಹೊರಗೆ
ಸರಳ ಸೌಜನ್ಯದಾಕೃತಿ ಕಡೆವ ಸಂಕಲ್ಪ.
ನೂರು ಬಗೆ ಭೇದಗಳ ಭೇದಿಸಿ ಬಂದ ತರುಣ
ಜನಮಾನಸದ ಶುದ್ಧಿ ನಿರ್ಮಲಾಂತಃಕರಣ
ಹಿಡಿದು ಮಿಡಿಯುವ ಧೀರವಾಣಿ, ವೀಣಾಲಾಪ.
ನೂತನ - ಪುರಾತನರು ವರ್ತಮಾನಕೆ ತವರು:
ಗಣಿಯ ಅಗಣಿತ ರತ್ನ ಶೋಧನೆಗೆ ಪ್ರಸ್ಥಾನ,
ಚಿರಂತನ ಪುಣ್ಯಪುರುಷರಿಗೆ ಪ್ರತ್ಯುತ್ಥಾನ
ಸಂಸ್ಥಾನದಲಿ ಸಿದ್ಧ ಸಿರಿಗನ್ನಡದ ತೇರು.
ವಾಸ್ತವಾದರ್ಶಗಳ ಬೆಸೆದಿರುವ ಬೀಸು ನಡಿಗೆ
ನೆಲಕಿಳಿಸಿ ತರಬಹುದೆ ಇವರಾಕಾಶ ಗಂಗೆ?

* ಗದಗಿನ ತೋಂಟದಾರ್ಯ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿಯವರು

ರಹಸ್ಯ

ಹೆಸರಿಗೆ ನಾಲ್ಕು ಹಸಿರೆಲೆಯಲ್ಲಿ ಜೀವ ಹಿಡಿದು
ಮೊಗ ಬಾಡಿಸದೆ, ಬೇಸಗೆಯ ಬಿಸಿಲ ಧಗೆಯಲ್ಲಿ
ಬಗೆಗುಂದಿ ಕಸಿವಿಸಿಗೊಳದೆ, ಮುಕ್ಕು ನೀರಿನಲಿ
ಬೇರುಗಳ ಮರೆಗೆ ಜಪ್ಪಿಸುತ ಮಣ್ಣಿಗೆ ಮಿಡಿದು
ಕಾದು ಕುಳಿತಾಗ ಏಕಾಏಕಿ ಮೊದಲ ಮಳೆ!
ಭೂಮಿಯಂತರಾಳದ ಸ್ಪೃಶ್ಯದೊಡನೆ ಹರ್ಷದ
ಹೊನಲು. ಹೊಳೆವ ನೀಲಾಗಸಕ್ಕೆ ರೆಕ್ಕೆ ಬೀಸಿದ
ಕುಕಿಲು, ಹೊಂಬೆಳಕು, ಕಣಕಣದಲ್ಲು ಜೀವ ಕಳೆ.
ಮಲ್ಲಿಗೆಯ ಮನಸು ಕುಡಿಯೊಡೆದು ಹಿರಿಹಿರಿ ಹಿಗ್ಗೆ-
ಕಳೆದ ಸುಗ್ಗಿಯ ನೆನೆದು ಹೂ - ಬೀಜಗಳ ಮೊಳಕೆ.
ಮೃಗಶಿರವು ಕಾಲಿಟ್ಟ ಚಣವೆ ಚಿಗುರಿದ ಗರುಕೆ.
ಒಂದೆ ದೇಟಿನಲಿ ಗುಲಾಬಿಗೇಳೆಂಟು ಮೊಗ್ಗೆ.
ಮಳೆಗಾಲಕ್ಕೆ ತನ್ನ ತೆರೆದ ಸೃಷ್ಟಿ- ರಹಸ್ಯ
ದೃಷ್ಟಿಗೆ ಬಿಟ್ಟುಕೊಟ್ಟಂತೆ ಬದುಕಿನ ಭವಿಷ್ಯ.

ಯಾವುದಕ್ಕೂ ಒಂದು ಮಿತಿಯುಂಟು*

ಯಾವುದಕ್ಕೂ ಒಂದು ಮಿತಿಯುಂಟು ಗತಿಯುಂಟು.
ನಿನ್ನ ಇತಿಮಿತಿಯ ವರ್ತುಲವರಿತು ಗುರುತಿಸದೆ
ಹೀಗೆ ಒಮ್ಮೆಲೆ ಹಾರಿ ಕೊಳ್ಳಕ್ಕೆ ಬೀಳುವದೆ?
ಗಡಿಯ ಮನ್ನಿಸು, ಮನಸು ಮಾಡಿದರೆ ಕಗ್ಗಂಟು
ಬಿಚ್ಚಿ ಸಾರಿಗೆ ಸರಳ. ಆಗ ಯಾರು ಯಾರಿಗೆ
ದೂರ ? ಏರಿದರೆ ಏರುವುದು ತೇನ್‌ಸಿಂಗನ
ಹಾಗೆ ಗೌರವದ ಮೇರು- ಶಿಖರದಾಲಿಂಗನ.
ಕಣಿವೆ ಕಂದರರದೆದೆಗೆ ಬೇಡ ಸೇಡಿನ ಧಗೆ.
ದ್ವೇಷಕ್ಕೆ ಮದ್ದು ಮದ್ದಲ್ಲ. ಎಂದಾದರೂ
ಕಿಡಿಯುಗುಳಿದರೆ ಹಬ್ಬುವುದು ಕಗ್ಗಾಡು - ಬೇಗೆ.
ಆರದದು ನಿನ್ನೊಡಲ ಕಿಚ್ಚು ನಂದುವವರೆಗೆ
ವಂಚಕ - ಪ್ರಪಾತದಂಚಿಗೆ - ಉರುಳಿಬಿದ್ದರೂ
ಬುದ್ಧಿ ಬಾರದಿರೆ ಕಲಿಸಲು ಸಿದ್ಧರೀ ಯೋಧರು.
ಹಿಮದಲ್ಲು ಪ್ರಜ್ವಲಿಸಿ ಧೇಶಭಕ್ತಿಯ ಸೊಡರು.

---

* ಸಂದರ್ಭ : ಕಾರ್ಗಿಲ್ ಕದನ

ಬೇರೊಂದು 'ಕಲ್ಯಾಣ'

ಝಗ್ಗನೆ ಬಿಸಿಲು! ಬಿಳಿ ಮೋಡಗಳ ನಡುವೆ ನೀಲಿ
ಕನ್ನಡಿ ಹಿಡಿದು: ಇಷ್ಟು ದಿನ ಮಳೆಯ ನೀರುಂಡು
ಬೆಳೆದ ಹಸಿರು ಹೊಸ ಹೊಳಪು: ಹೊದ್ದು ಕಿನಕಾಪು
ಹೊರಟಿದೆ ಜಗವ ಮುದ್ದಿಸಲು ದಾಟಿ ಜಾತಿ -ಜಾಲಿ.
ಸುಳ್ಳು ನಟನೆಯ ಜಾಲದಲಿ ಸಿಲುಕಿ ಸಂಕುಚಿತ -
ಗೊಂಡ ಮಾನವ ಮನಸಿಗಿಲ್ಲೇನು ಕೆಲಸ? ಬರಿ
ಗುಲ್ಲು -ಗೊಂದಲ. ಸಂದಿ ಗೊಂದಿಯಲಿ ತರಾತುರಿ-
ತಾನೆ ಹೊತ್ತಿಸಿದಗ್ನಿ ಕುಂಡದಲಿ ಭಯಭೀತ.
ಸುಟ್ಟುಸುಡುಗಾಡು ಕಣ್ಣೆದುರು ಒಟ್ಟಿಕೊಂಡಿರೆ
ಬೂದಿಯಲಿ ಹಾದವರಿಗಿಲ್ಲ ಹೆಜ್ಜೆಯ ಗುರುತು.
ಬೋಧಿ ವೃಕ್ಷದ ಟೊಂಗೆಯಲಿ ಕುಳಿತ ಪಕ್ಷಿಗಳು
ಹಾರಿ ಹೋಗಿವೆ ಬೇರೆ ದಿಕ್ಕಿನಲಿ: ಹುಡುಕಿದರೆ
ಹಾಡಿನ ಜಾಡು ಹಿಡಿದು ಸಿಗಬಹುದು ನಿಲ್ದಾಣ:
ಕ್ರಾಂತಿ ಅರಗಿಸಿಕೊಂಡ ಬೇರೊಂದು 'ಕಲ್ಯಾಣ'.

ಸಿದ್ಧರಾಮ ಜಂಬಲದಿನ್ನಿ

ನೊಂದ ನೋವು ಮೊಗವನಂದಗೆಡಿಸದೆ, ಕೋಮಲ
ನಗೆಯ, ಹಾಡು - ಪಾಡಿನ ಬಗೆಯ ಬಗಿದು ನೋಡುವ,
ಅಂಗೈಯಲ್ಲಿ ಅಂತಃಕರಣವಿಟ್ಟು, ಭಾವ-
ದುಂಬಿ ಝೇಂಕಾರಕ್ಕೆ ಅರೆ ಬಿರಿದ ಹೃತ್ಕಮಲ.
ಆ, ಈ ಘರಾಣೆಗಳ ಹದಿನಾರಾಣೆ ತಿರುಳು
ಅರಗಿಸಿಕೊಂಡರೂ ನಿಜಗುಣರ ಮೇಣೆ ಹೊತ್ತು
ಪದವೆತ್ತಿರಲು ಆತ್ಮಕುನ್ನತ ಪದವಿ. ಹತ್ತು
ಮುತ್ತಿನ ನಡುವೆ ರುದ್ರಾಕ್ಷಿ ಸಾಕ್ಷಿಯ ಕೊರಳು.
ಚಾಮರಸನೊಳ ಹೊಕ್ಕು ಪಡೆದ 'ಶರಣಾರ್ಥಿ'
ಪದ್ಯವ ಮಿದ್ದಿ ಮಿಡಿದಂತೆ ನಾದ ನವನೀತ.
ವಚನದುಕ್ಕಂದಕ್ಕೊ ಸಿದ್ಧ ಸದ್ಯೋಜಾತ.
ಬದುಕಿಗದೇ ಹಂಬಲ, ಭಲಾ ಜಂಬಲದಿನ್ನಿ.
ಕವಿ-ಗಮಕಿ - ಗಾಯಕ ಬೆರಸಿ ಬೇರಿಲ್ಲದಿರವು-
'ಸಿದ್ಧರಾಮಾ'! ಕೊಳ್ಳದಲಿ ಪ್ರತಿಧ್ವನಿಸುತಿಹುದು.

ಲಂಕೇಶ

ಪ್ರಕೃತಿ - ವಿಕೃತಿಯ ನಡುವೆ ತಕ್ಕ ಆಕೃತಿಯ ಕಡೆ-
ಯಲು ನೂರು ಕನಸುಗಳ ಕೋಟೆಯ ಕಟ್ಟಿ, ಕೆಡವಿ
ಸುರಂಗ ಮಾರ್ಗದಿಂದ ಹೊರಬಂದು, ಮೈಕೊಡವಿ
ಮೀಸೆ -ನಗು; ವೀರಗಾಸೆಯ ಕುಣಿತ ಕಟ್ಟಕಡೆ.
ಬ್ರಹ್ಮಾಂಡಕ್ಕೆ ಕಾವು ಕುಳಿತ ಪ್ರತಿಭೆಯ ಸ್ಫೋಟ-
ಅಂತರಾಳಕ್ಕೆ ಮೌನ - ಧ್ಯಾನದುನ್ಮಾದ.
ಬಹಿರಂಗದಲ್ಲಿ ರಣರಂಗ: ದ್ವಂದ್ವಯೋಧ.
ವೈರುಧ್ಯಗಳ ಮೀರಿ ಬೆಳೆದದ್ದು ಮಾವು - ತೋಟ.
ಅಧಿಕಾರ ಗದ್ದುಗೆಯನಲುಗಾಡಿಸುವ ತವಕ-
ತಿಮಿಂಗಲಕೊಡ್ಡಿದ ಬಲೆಯೊಳಗು ಪಾಪದ ಮೀನು-
ಕಪ್ಪು - ಹಣತೆಗಳಿಗೆಣ್ಣೆಯೆರೆದೆತ್ತಿದ ಬೆಳಕು.
'ಛೆ' ಹೀಗುಂಟೆ? ತಂಟೆ ತೆಗೆವವರೆ ನಗುವ ಅಣಕ.
ಅರ್ಥವುಂಟೆ, ಸ್ವಾರ್ಥವಿರದೆ ಬಂದೆರಗಿದ ಸಾವಿಗೆ?
ಯಾರ ಕಿವಿಗು ಬೀಳದಂಥ ನಟ್ಟಿರುಳಿನ ನೋವಿಗೆ.

ಶಂ.ಗು.*

ಎಳೆಯ ಹೃದಯಗಳ ಭಾವದೆಳೆಯ ಹಂದರದಲ್ಲಿ
ಹೂಗನಸುಗಳ ಬಳ್ಳಿ ಹಬ್ಬಿಸಿ
ಬಣ್ಣ ಬಣ್ಣದ ಚಿಟ್ಟೆಗಳ ದಣಿವಿರದೆ ಕುಣಿಸಿ
ನುಣ್ಣಗಿನ ದನಿಯ ಹಾಡಿಗೆ ಚಪ್ಪಾಳೆತಟ್ಟಿ-
ಆಟವೆ? ಪಾಠವೆ? ಸಾಹಸದ ಓಟವೆ?
ಎಲ್ಲಿಯೂ ಚಿತ್‌ಕಾಟವಿಲ್ಲದೆ
ಹೊಚ್ಚ ಹೊಸ ಪಾಟಿಯಲಿ ತಿದ್ದಿತೀಡಿಸಿದ ಮೋಡಿ.

ಈ ಬದಿಗೆ ಬನ್ನಿ:
ಇಲ್ಲಿರುವ ಪುಟದಲ್ಲಿ ತೆರೆದುಕೊಂಡಿದೆ
ಬೆಳೆದ ಮನಸುಗಳ ಬದುಕಿನೊಳತೋಟಿ.
ಹತೋಟಿ ಮೀರದೆ ಮಿಡಿವ 'ರುದ್ರವೀಣೆ'.
ಕಥೆಯೆಂದರೆ ಕೇವಲ ವ್ಯಥೆಯೆ?
ಸಹನೆಗೂ ಇರಬಹುದು ಒಂದು ಕೋಣೆ.
ಇರುವ ಬಂಧದಲಿ 'ಲಲಿತ' ಬರೆಹವೂ ಚೆಂದ.
ನವಿರು ಹಾಸ್ಯದ ಕುಡಿ.
ಏರುಪೇರಾಗದಂತೆ ಎರಡೂ ಪರಡಿ.

ಬಿಳಿ ಜೋಳದ ಕಪ್ಪುಹೊಲದ ಬದುವಿನಲಿ
ಅಪರೂಪಕ್ಕೆ
ಬೆಳ್ಳಗಿನ ಕೊಕ್ಕರೆ,
ಮೆಲ್ಲಗೆ ಬಂದು ಸಭೆಯಲ್ಲಿ ಕುಳಿತು ನಕ್ಕರೆ-
ಅರೆ ಶಂ.ಗು!
ಎಷ್ಟೊಂದು ಅಕ್ಕರೆ ನಮಗು ನಿಮಗು.

---

* ಬಿಜಾಪುರದ 'ಆದರ್ಶ ಶಿಕ್ಷಕ' ಶ್ರೀ ಶಂ.ಗು. ಬಿರಾದಾರ

ಅದಕ್ಕದೇ ಮುನ್ನುಡಿ *

ಪೂರ್ವಾಶ್ರಯದಲ್ಲಿಯೇ ಹೊತ್ತ ಹೊರೆಯ ಕಿತ್ತೆ -
    ಸೆದು ಬಿಡುಗಡೆ ಪಡೆದ 'ಅಂತರ'ದಲ್ಲು ಒಳದನಿ
    ಮಿಡಿತ. ಮಾನವಧರ್ಮ ತಳಹದಿಯಾಗಿ ಬದುಕಿ
ಅನಂತವಾಗಿ ಅರಳುವಾಸೆ ಜೀವಂತ. ಬಟ್ಟೆ
ಬದಲಿಸಿದರೂ ಸುಳ್ಳು ಸೃಷ್ಟಿಗೆಡೆಗೊಡದಂತೆ
    ಧೂಳು ಬೀಳದ ದೃಷ್ಟಿ. ಪಂಚೇಂದ್ರಿಯ ಮರೆಯದೆ
    ಮಣ್ಣಿಗೆ ಮೈಯ, ಮುಗಿಲಿಗೆ ಮನಸ್ಸು ತೆರೆದೆ.
ತತ್ವಕ್ಕೆ ಕೈಗೂಡಿ ಬರದಿದ್ದರೇನಂತೆ
ಒಮ್ಮೊಮ್ಮೆ ಕವಿತ್ವ, ಹುಟ್ಟಿಸಾವ ಕಷ್ಟದಲಿ
    ಕಟ್ಟುವ ಕನಸು: ಜೀವಕ್ಕೆ ಬೇಕಾದ ಹಾಡು.
    ಮನುಷ್ಯತ್ವಕ್ಕೆ ತೆಕ್ಕೆ ಬಿದ್ದರಾವುದು ಈಡು?
ಸೀಮೋಲ್ಲಂಘನಗೈದು ಜನಮನದ ಮಂಟಪದಿ
    ಹೊಸ ಪಂಜು-ಮೆರವಣಿಗೆ ಗದ್ಯಪದ್ಯವು ಕೂಡಿ.
    ಕಣ್ಣೆದುರೆ 'ಮಣ್ಣು-ಮುಗಿಲು': ಅದಕದೇ ಮುನ್ನುಡಿ.

---

* ಶ್ರೀ ವೀರಭದ್ರ ಚೆನ್ನಮಲ್ಲ ಸ್ವಾಮಿಗಳ 'ಮಣ್ಣು-ಮುಗಿಲು' ಕವನ ಸಂಗ್ರಹಕ್ಕೆ ಮುನ್ನುಡಿಗೆ ಬದಲು

ಬರೆದು ತೀರದ ಬದುಕು *

ಬದುಕು ಕೊಡುವುದಕ್ಕೆ ಕೊನೆಯಿಲ್ಲ; ಕೊಟ್ಟಷ್ಟು ಪಡೆ-
ದು ಅಟ್ಟುಣುವ ಬಗೆ ಬೇರೆ. ಇಷ್ಟಾನಿಷ್ಟಗಳ
ಕಷ್ಟಸುಖದಲಿ ಕುದಿಸಿ, ಸ್ಥಾಯಿ -ಸಂಚಾರಿಗಳ
ತಾಯಾಗಿ, ಅನುಭವಕೆ ಬಾಗಿ, ನಿಂತ ಕಡೆ
ನೆರಳು ಹರಡುವ ಗಿಡದ ಚಿಗುರು - ಹೂ- ಕಾಯಾಗಿ
ಸಂಪ್ರದಾಯವ ಮೀರಿ ಮಾಗಿದ ಹೆಮ್ಮಿ(ಮ್ಮೆ)ಗೆ ನಗೆ.
ನಡುಗುವ ಬೆರಳ ನಡುವಿನಲಿ ತುಡಿವ ಲೇಖನಿಗೆ
ಮಿಡಿವ ಹೃದಯದ ಸೂಕ್ಷ್ಮ ಸಹ ಜಾತ್ಮಕಥೆ. ತಿರುಗಿ
ಮಕ್ಕಳಿಗೆ ಬೀಸಿ 'ಮಾಯದ ಕೋಲು' ನಕ್ಕುನಲಿ-
ದಾಡಿಸಿತು ಬಣ್ಣದ ಚಿಟ್ಟೆ, ಹೂವಿಂದ ಹಾರಿ.
ಅರಳು ಮರಳಿಗು ಹೊಗರು ಹೊಮ್ಮಿದ ಸ್ವಗತಲಹರಿ.
ಮತ್ತೇನು ಹುದುಗಿತ್ತೊ ನೆನಪಿನ ಹಗೇವಿನಲಿ.
ಎಷ್ಟೊ ರಾತ್ರಿಗಳ ದಾಟಿ ಬೆಳಗು ನಿರೀಕ್ಷಿಸಲು-
ಬರೆದು ಮುಗಿಸಿದ ಹಾಗೆ ಸ್ವಚ್ಛವಾಯಿತು ಮುಗಿಲು.

---

* ಶ್ರೀಮತಿ ಶಾರದಾ ಹೆಮ್ಮಿಗೆಯವರ 'ಬದುಕು ಕೊಟ್ಟಿದ್ದು, ಕಲಿಸಿದ್ದು'

ಹನಿಗವನಗಳು

ತನ್ನನ್ನು ಪ್ರದರ್ಶನಕ್ಕಿಟ್ಟು
ಪರಿತಪಿಸುತ್ತಾರೆಂದು
ಸಾವು ಬಹುಶಃ ಭಾವಿಸಿರುವುದಿಲ್ಲ.
ಆಶ್ಚರ್ಯವೆಂದರೆ
'ವಿಧಿ'ಗೂ ವಿಧಿನಿಷೇಧ ತಪ್ಪಿದ್ದಲ್ಲ.

★

ಮೂವತ್ತೈದು ಕವಿಗಳ ಕಿಕ್ಕಿರಿದ ಕವಿಗೋಷ್ಠಿ-
ನಿಜಕ್ಕೂ ಸಮ್ಮೇಳನ ಸಾಧಿಸಿದ ಹಿರಿಮೆ.
ಆದರೂ
ನಮ್ಮ ರಾಜ್ಯದ ಮಂತ್ರಿಮಂಡಳಕ್ಕಿಂತ
ಗಾತ್ರದಲ್ಲಿ ಇದು ತೀರ ಕಡಿಮೆ.

★

ಹೋಳಿ ಹುಣ್ಣಿಮೆಯ ಬಣ್ಣ ತೊಳೆದು
ಬಟ್ಟೆ ಬದಲಿಸುವಾಗ
ಗಿಡಮರದ ಚಿಗುರು - ಹೂಗಳ ಹಿಂದೆ
ಅವಿತು ಕುಳಿತಿದ್ದ ಕಾಮಣ್ಣ-
ಹೊಡೆದು ಕಣ್ಣ.

★

ಬರಿ ಹೆಸರಿನ ಮೇಲೆಯೇ ಇಂದು
ಯಾರನೂ ನಂಬುವಂತಿಲ್ಲ:
'ಬಹುಧಾನ್ಯ'ದಲ್ಲು ಧಾನ್ಯದ ಕೊರತೆ, ಬೆಲೆ ಏರಿಕೆ,
'ಪ್ರಮಾಥಿ'ಯಲ್ಲೂ ಹಲವು ಪ್ರಮಾದಗಳು.

ಅದಕ್ಕಾಗಿ ಈಗಲೇ ಮನವಿ ಸಲ್ಲಿಸೋಣ
'ವಿಕ್ರಮ'ಕ್ಕೆ
ಯಾವುದೂ ಕ್ರಮ ತಪ್ಪಿ ನಡೆಯದಂತೆ.

★

ಆ ಶಬ್ದ ತೆಗೆದು, ಈ ಶಬ್ದ ಹಾಕಿ
ಮಾತ್ರೆ, ಗಣಗಳ ಜೊತೆಗೆ ಗುದ್ದಾಡಿ
ಅಂತೂ ಪದ್ಯ ಬರೆದು ಮುಗಿಸಿ
ಕೋಣೆಯ ಹೊರಗೆ ಹಣಕಿದಾಗ -
ಗಿಡದ ಕೊಂಬೆಯಲ್ಲಿ ಹೊರಹೊಮ್ಮಿತ್ತು
ಚಿಗುರು -ಹೂಗಳ ಕವಿತೆ ಸಾಲು ಸಾಲು.

★

ಬದುಕಿನ ವಿಚಿತ್ರಗಳ ಚಿತ್ರಹಿಂಸೆಯ ನಡುವೆ
ಪ್ರೀತಿ ಚಿಗುರಿಸಲಾರೆಯೇಕೆ ಚೈತ್ರ?
ಮನುಕುಲದ ಬೇರಿಗಾ ನೀರು ನಿಲುಕದೆ ಇಹುದೆ?
ಯಾಕೆ ಬರಡಾಗಿಹದು ಮನುಜ ಹೃದಯ?

ಅನುವಾದಗಳು

ರವೀಂದ್ರರ ನುಡಿಮುತ್ತುಗಳು
('Stray Birds' ದಿಂದ ಆಯ್ಕೆ)

೧

ಬೇಸಗೆಯಲ್ಲಿ ಅಲೆದಾಡುವ ಹಕ್ಕಿಗಳು
ನನ್ನ ಕಿಟಕಿಯ ಬಳಿ ಕುಳಿತು
ಹಾಡಿ, ಹಾರಿ ಹೋಗುತ್ತವೆ.
ಹೇಮಂತದ ಹಣ್ಣೆಲೆಗಳು
ಹಾಡಲರಿಯದೆ ಗಾಳಿಗೆ ತೇಲುತ್ತ
ಕಿಟಕಿಯ ಬಳಿ ನಿಟ್ಟುಸಿರಿನೊಂದಿಗೆ
ಕೆಳಗುರುಳುತ್ತವೆ.

೨

ಹೂವಿನಲ್ಲಿ
ನೆಲದ ಕಂಬನಿಗಳು
ತಮ್ಮ ನಗೆಯನ್ನರಳಿಸುತ್ತವೆ.

೩

'ಸಮುದ್ರ, ಯಾವುದು ನಿನ್ನ ಭಾಷೆ?'
'ಚಿರಂತನ ಪ್ರಶ್ನೆ'.
'ನಿನ್ನ ಭಾಷೆ ಓ ಆಗಸವೆ?'
'ಚಿರಂತನ ಮೌನ'.

೪

ಹಕ್ಕಿ ಅಂದುಕೊಳ್ಳುತ್ತದೆ;-
'ನಾನು ಮೋಡವಾಗಬೇಕಿತ್ತು'.

ಮೋಡಕ್ಕೆ ಅನಿಸುತ್ತದೆ:
'ನಾನೊಂದು ಹಕ್ಕಿಯಾಗಬೇಕಿತ್ತು'

೫

ನಿನ್ನೆಯ ಇರುಳಿನ ಬಿರುಗಾಳಿ
ಇಂದಿನ ಮುಂಜಾವಿಗೆ
ಶಾಂತಿಯ ಬಂಗಾರದ ಕಿರೀಟ
ತೊಡಿಸಿದೆ.

೬

ಹಚ್ಚಿ ನೋಡಿ ಹಕ್ಕಿಗೆ
ಬಂಗಾರದ ರೆಕ್ಕೆ;
ಮುಂದೆ ಅದು ಹಾರಲಾರದೆಂದೂ
ಆಕಾಶಕ್ಕೆ.

೭

ಪ್ರೀತಿಯಲ್ಲಿ ಕಂಡುಕೊ ನಿನ್ನನ್ನು
ಸೌಂದರ್ಯವೆ,
ಕನ್ನಡಿಯ ಹೊಗಳಿಕೆಯಲ್ಲಲ್ಲ.

೮

ಭೂಮಿಗೆ ಮುತ್ತನಿತ್ತು, ಕಿವಿಯಲ್ಲಿ ಹೇಳಿದವು
ಮಳೆಹನಿಗಳು:
ನಾವು ಮನೆಗಾಗಿ ಕಾತರಿಸಿದ
ನಿನ್ನ ಮಕ್ಕಳು
ಸ್ವರ್ಗದಿಂದ ಮರಳಿ ಬಂದಿದ್ದೇವೆ
ಸೇರಲು ನಿನ್ನ ಮಡಿಲು.

೯

ಬೇರುಗಳು
ಭೂಮಿಯಾಳದ ಟೊಂಗೆಗಳು.
ಟೊಂಗೆಗಳು
ಗಾಳಿಯಲ್ಲಿನ ಬೇರುಗಳು.

೧೦

'ಸರಬರ ಸದ್ದು ಮಾಡುವ ನಾವು
ಬಿರುಗಾಳಿಗುತ್ತರಿಸುವ ಎಲೆಗಳು.
ಇಷ್ಟೊಂದು ಮೌನವಾಗಿದ್ದೀಯಲ್ಲ
ನೀನು ಯಾರು?'
'ನಾನೇ? ನಾನು ಕೇವಲ ಹೂವು'.

೧೧

ಮುಳುಗುತ್ತಿರುವ ಸೂರ್ಯ ಕೇಳಿದ:
'ಯಾರಿದ್ದಾರೆ ನನ್ನ ಕರ್ತವ್ಯ ನೆರವೇರಿಸಲು?'
ನಮ್ರವಾಗಿ ನುಡಿಯಿತು ಮೂಲೆಯ ಹಣತೆಯೊಂದು:
'ನನ್ನೊಡೆಯಾ, ನನ್ನ ಕೈಲಾದುದನು
ನಾನು ಮಾಡಬಲ್ಲೆ.'

ಅಮ್ಮ ಹೇಳಿದ ಸುಳ್ಳುಗಳು

ಹೆಣ್ಣಿನ ಕೂಡ ಸಲಿಗೆ ಬೆಳೆಸಿದರೆ
ಕಿವಿ ಕಡಿದು ಹೋಗುತ್ತದೆ ಎಂದೆ.

ತಪ್ಪು ಮಾಡಿದರೆ ಸ್ವಾಮಿ
ಕಣ್ಣು ಕುಕ್ಕುತ್ತಾನೆ ಎಂದೆ.

ಒಂದು ಮೊರ ತೌಡಿಗೆ
ನನ್ನ ಕೊಂಡುಕೊಂಡೆ ಎಂದೆ.

ಎಷ್ಟು ಸುಳ್ಳುಗಳ ಹೇಳಿದೆಯಮ್ಮ
ನನ್ನ ಹತ್ತಿರ ಈ ಮುಂಚೆ.

ಅಷ್ಟು ಸುಳ್ಳುಗಳ ಆಗ
ಹೇಳಿದ ನೀನು ಈಗ
ಏಕೆ ನಿಲ್ಲಿಸಿಬಿಟ್ಟೆ?

ತಪ್ಪುಗಳ ಮೇಲೆ ತಪ್ಪು ಮಾಡುವ
ಶಕ್ತಿ ಹೋಗಿಬಿಟ್ಟಿದೆಯೆಂದೆ?
ನನಗಿನ್ನು ಸುಳ್ಳುಗಳ ಅಗತ್ಯವಿಲ್ಲ
ಎಂದು ತಿಳಿದುಕೊಂಡೆಯ?

ಅಥವಾ ವಯಸ್ಸಿಗೆ ಬಂದವರಿಗೆ
ತಕ್ಕ ಸುಳ್ಳು ಹೇಳುವ ಹೊಣೆ
ಸರಕಾರದ್ದು ಎಂದು ಭಾವಿಸಿದೆಯೆ?

ತಾಯಿ ತನ್ನ ಹಾಲು ನಿಲ್ಲಿಸುವ ಹಾಗೆ
ತನ್ನ ಸುಳ್ಳುಗಳನ್ನೂ ನಿಲ್ಲಿಸಿ ಬಿಡಬಹುದೆ?
ನಿನ್ನ ಮಗುವಿಗೆ ನಿನ್ನ ಬಿಟ್ಟರೆ
(ಇಂಥ) ಸುಳ್ಳುಗಳು ಬೇರೆಲ್ಲಿ ಸಿಗುತ್ತವೆ?

-'ಜ್ಞಾನಕೂತ್ತನ್'

ಕಾಗೆ

ಕಾಗೆಯನ್ನು ನಾನು ಬಲ್ಲೆ
ಯಾರಿಗೆ ಗೊತ್ತಿಲ್ಲ?
ಆದರೆ ಈ ಕಾಗೆ ನನಗೆ ಅಪರಿಚಿತ.

ನನ್ನ ಜೊತೆ ಏನೋ ಮಾತಾಡುವಾತುರ-
ನನ್ನೆದುರು ಕುಳಿತಿದೆ.

ನಮ್ಮ ಊರಿನ ನಮ್ಮ ಕುಟುಂಬದವರಿಗೆ
ಪರಿಚಿತವಿರುವ ಕಾಗೆಯೊಂದು
ನಮ್ಮ ಮನೆಯ ಸಣ್ಣ ಚಮಚೆಯನ್ನೊಯ್ದು
ಬದಲಿಗೆ ದೊಡ್ಡ ಸೌಟೊಂದನ್ನು ತಂದು
ಒಂದು ದಿನ ಅಂಗಳದಲ್ಲಿ ಹಾಕಿತಂತೆ.

ಈ ಕಾಗೆ ಏನು ಮಾಡುವದೊ
ಈ ಕಾಲು, ಈ ಮೈ, ಈ ಕತ್ತಿನ ಬಣ್ಣ....
ಇದಕ್ಕೆ ಆಧುನಿಕ ಜಗತ್ತು ರೂಢಿಯಾಗಿದೆ.

ಕಾಗೆಯ ಚುಂಚಿನಲ್ಲಿ ತಂತಿಯ
ಸಣ್ಣ ತುಂಡುಗಳ ನಾನು ಕಂಡೆ.

ನಾಲ್ವತ್ತು ವಯಸ್ಸಿನ ಅವಧಿಯಲ್ಲಿ-
ಮೂರು ಸಲ
ರೆಕ್ಕೆಯಿಂದ ಬಡಿದ ಆ ಕಾಗೆಗಳನ್ನು ಕೂಡ
ನಾನು ಗುರುತಿಸಲಾರೆ.
ತಿರುಗಿ ಇನ್ನೊಂದು ಸಲ ಈ ಕಾಗೆ

ನನ್ನೆದುರೇ ಬಂದು ಕುಳಿತರೆ
ನನಗದರ ಗುರುತು ಸಿಗಬಹುದೆ?

ಯಾಕೆಂದರೆ ಕಾಗೆಯನ್ನು ಯಾರೂ
ಸಂಪೂರ್ಣ ನೋಡಲು ಸಾಧ್ಯವಿಲ್ಲ.

-'ಜ್ಞಾನಕೊತ್ತನ್'

ಮಳೆಗಾಲದ ದಾರಿ

ಮಳೆಗಾಲದ ಒಂದು ಶ್ರಾದ್ಧ
ತಾತನಿಗೆ ತಂದೆ ಮಾಡಿದ್ದು.

ಮನೆಯೊಳಗೆ
ತಗಡಿನ ದೊಡ್ಡ ಖಾಲಿ ಡಬ್ಬಿಯೊಳಗೆ
ಗಾಳಿ-ಮಾತು.

ಕಣ್ಣು ಮುಚ್ಚಿಕೊಂಡು ನಡೆಯುವ
ಅಭ್ಯಾಸವಿದ್ದ ನಾನು
ಆಚಾರಕ್ಕೆ ಹೆದರಿ
ಹಿತ್ತಲ ಕಡೆಗೆ ಬಂದೆ.

ಹಿತ್ತಲ ಗೋಡೆಯ
ಪುರಾತನ ಒದ್ದೆಯಲ್ಲಿ
ಮಿನುಗುವ ಹೆಜ್ಜೆ ಗುರುತಿಟ್ಟು
ಮೆಲ್ಲಗೆ ಮೇಲೇರುತ್ತಿರುವ ಒಂದು ಬಸವನ ಹುಳು.

ಗೊತ್ತಿಲ್ಲವೆ ಬಸವನ ಹುಳಕ್ಕೆ
ಆ ಗೋಡೆ ಕಡಿದಾಗಿದೆಯೆಂದು?
ಪುನಃ ಮೇಲೇರುವುದು
ಮತ್ತೆ ಕೆಳಗೆ ಬೀಳುವುದು.

ಶ್ರಾದ್ಧ ಪಿಂಡಕ್ಕೆ
ಕಾದಿರುವ ದೇವತೆಗಳು

ಬಸವನ ಹುಳವ ಕೆಳಗೆ ದಬ್ಬಿ
ಆಟವಾಡುತ್ತಾರೆ ಹೊತ್ತುಗಳೆಯಲಿಕ್ಕೆ.
ಇದು ಶ್ರಾದ್ಧದ ದಿನ
ಮಳೆಯ ದಿನ.

ಸಾಲ ಕೊಂಡದ್ದಕ್ಕೆ, ಉಪವಾಸ ಬಿದ್ದದ್ದಕ್ಕೆ
ಮಾನಭಂಗವಾದದ್ದಕ್ಕೆ ಕಣ್ಣೀರು
ಹಾಕದ ತಂದೆ.

ಮೈನಡುಗಿ, ಅತ್ತು, ಸಮಾಧಾನ ತಂದುಕೊಂಡು
ಇಂದ್ರಿಯಗಳುಡುಗಿ ಮಡಿದ ದಿನ.

ಬೆಂಕಿಯ ಮುಂದೆ ಕುಳಿತೆ
ತಾತನ ಹೆಸರಿನೊಡನೆ ತಂದೆಯ ಹೆಸರು
ಸೇರಿಸಿದರು ಪುರೋಹಿತರು.

ಒಂದು ಪಾತ್ರೆಯಲ್ಲಿದ್ದ ನೀರನ್ನು
ಇನ್ನೊಂದು ಪಾತ್ರೆಗೆ
ಉದ್ಧರಣೆಯಿಂದ ಸುರಿದೆ.

ಆಗ
ಅಂಗಳದ ಗೋಡೆಯಲ್ಲಿ
ಬೆರಳೇ ಮೈಯಾಗಿ
ಅದುವೇ ಕಾಲಾಗಿ ತೆವಳುತ್ತದೆ
ಒಂದು ಬಸವನ ಹುಳು.

-'ಜ್ಞಾನಕೂತ್ತನ್'

ಮತ್ತೆ ಅವರು

ಕಾರ್ಮೋಡ ಮಳೆಗರೆಯ ಬೇಕೆಂದಿಲ್ಲ; ಆದರೂ
ಸುಂದರವಾಗಿವೆ ಬೆಳಗಿನ ಮೋಡಗಳು.

ಹಾರೋಣ ಎಂದುಕೊಂಡು
ಮೇಲೆದ್ದ ಆಕಾಶಕ್ಕೆ
ರೆಕ್ಕೆಗೆದರಿ.
ಹಾರುವ ನನ್ನ ಕಾಲುಗಳ ನಡುವೆ
ಪವಿತ್ರ ಗೋಪುರದ ಕಳಸಗಳು ಕೆಲವು
ಭೂಮಿಯ ಮೇಲೆ.

ನಿಶ್ಚಲ ಮರಗಳ
ದುಂಡು ತಲೆಗಳ ನಡುವೆ
ಅಡಗಿಕೊಂಡು
ಅವರು ಗುಂಡು ಹಾರಿಸಿದರು:
ಎಲ್ಲಿಯೂ ತಂಗದ ಆ ಹಕ್ಕಿ ಅಗೊ ಅಲ್ಲಿ ಎಂದು.

ಆಗಸದಲ್ಲಿ ಹೊಗೆಯ ರಂಗೋಲಿ ಹಾಕಿ
ನಾನು ಕೆಳಕ್ಕೆ ಬೀಳುವಾಗ
ಅವರು ಹೋಗಿಬಿಟ್ಟರು
ಆ ದಿನದ ಕೆಲಸ ಮುಗಿದಿತ್ತು.

ಎಲ್ಲಿಯೂ ತಂಗದ ಹಕ್ಕಿಗೆ ನಿಮ್ಮ ತಂದೆ
ಇಂದು ಗುಂಡು ಹಾಕಿದರೆಂದು
ತಾಯಂದಿರು ಮಕ್ಕಳಿಗೆ ಕತೆ ಹೇಳಿದರು.

ಮಣ್ಣಿನೊಡನೆ ಬೆರೆತು, ನೀರ ಜೊತೆ ಕಲೆತು
ಮರುದಿನ ದೊಡ್ಡ ಸಾಗರವ ಸೇರಿದೆ.

ತೆರೆಗಳಡಗಿದ ಸಮುದ್ರ ಮಧ್ಯದಲ್ಲೆಲ್ಲ ಅವರು
ನನ್ನ ಹುಡುಕುತ್ತ ಕಾಲ ಕಳೆದರು.
ಕಡಲ ಕುದಿಸಲಾರದ ಸೂರ್ಯನ
ಆಕಾಶ ಮಧ್ಯದಲ್ಲಿ ನೋಡಲೋಸುಗ ನಾನು
ಅಂದು ದಂಡೆಗೆ ಬಂದೆ.

ಆಳವಾದ ಸಮುದ್ರದಲ್ಲೀಜಿ ಬಂದೆ. ಅವರು
ನಾ ದಂಡೆಗೆ ಹತ್ತುವಾಗ ಗುಂಪು ಗೂಡಿ
ಗುಂಡಿಕ್ಕಿದರು ಒಂದೇ ಸವನೆ, ನನ್ನ ನೆತ್ತರವ
ತೊಳೆದವು ಸಮುದ್ರದಂಡೆಯ ತೆರೆಗಳು.

ಬಂದೂಕುಗಳ ಹೆಗಲ ಮೇಲಿಟ್ಟು
'ಯಾವ ದಿಸೆಯಿಂದ ನೋಡಿದರೂ
ಬಂದೂಕಿನ ಸೌಂದರ್ಯ ಬಂದೂಕಿಗೆ' ಎಂದು
ಹೊರಳಿ ನೋಡಿದವನೊಬ್ಬ ಹೇಳಿಹೋದ.

ಆಕಾಶದಲಿ ನಗುವ ಮಧ್ಯಾಹ್ನ ದೇವನನು
ಕಂಡೆ ನೆಗ್ಗಲಿಯ ಹೂವಿನಂತೆ.

ಬಂದೂಕಿನ ಗುಂಡಿನಿಂದ ಛಿದ್ರಗೊಂಡ ಮೈಯನ್ನು
ಸಮಿತ್ತಿನಂತೆ ಶೇಖರಿಸಿ, ಮತ್ತೆ
ಆಕಾಶಕ್ಕೆ ಹೋದೆ.

ಅಂದು ರಾತ್ರಿ ಅವನ ನಲ್ಲೆಯರು
ಮಿಗಿಲಾಗಿ ಲಲ್ಲೆಯಾಡಿ ಕೂಡಿರಬಹುದು. ನಾನು
ಎಲ್ಲಿಯೂ ತಂಗದೆ, ಎಲ್ಲಿಗೂ ಹಾರುವೆ,
ಹಳ್ಳದಲ್ಲೂ ದಿನ್ನೆಯಲ್ಲೂ.
ಮರಣ ಬಂದರೂ ಮರಣದ ನಡುವೆ
ಹಾರುವದು ಸುಖ.

ಆ ಬಂದೂಕುಗಳ ಗೋಡೆಗಾನಿಸಿಟ್ಟು
ಪ್ರೇಮಿಗಳನಾಲಿಂಗಿಸಿ
ಆ ಹಕ್ಕಿಯ ಕೊಂದ ದೊಡ್ಡ ಕತೆ ಹೇಳಿ
ಸಂತೋಷಪಡುವ ಅವರನಾಶೀರ್ವದಿಸಿ
ಹಾರಿದೆ ಮೇಲೆ ಮೇಲೆ.

-'ಜ್ಞಾನಕೂತ್ತನ್'

ನನ್ನ ಬಸ್ಸು

ನನ್ನ ಬಸ್ಸು ಯಾವಾಗಲೂ
ನನ್ನ ಕಣ್ಣು ತಪ್ಪಿಸಿ ಹೋಗುತ್ತದೆ.
ಬೇಡವಾದ ಬಸ್ಸುಗಳು
ಒಂದರ ಹಿಂದೊಂದು ಬಂದು
ನಾನು ಹತ್ತುವುದಕ್ಕೆ ಕಾದು
ಕೆರಳಿ ಹೋಗಿ ಬಿಡುತ್ತವೆ
ನನ್ನ ಮಂಕಾಗಿಸಿ.

ಎಂದೋ ಒಮ್ಮೆ
ಕರುಣೆ ತೋರಿ ನನ್ನ ಬಸ್ಸು
ಬೇಡವಾದ ಬಸ್ಸಿನ ಹಿಂದೆ
ಮುಖ ಮರೆಸಿಕೊಂಡು ಬರುತ್ತದೆ.

ಮುಂದೆ ನಿಂತ ಬಸ್ಸನ್ನು ದಬ್ಬಿ
ಹಿಂದಿರುವ ನನ್ನ ಬಸ್ಸು ಹಿಡಿಯಬೇಕೆಂದಾಗ
ಗಕ್ಕನೆ ಬಲಕ್ಕೆ ಹೊರಳಿ ತೆರಳಿ ಬಿಡುತ್ತದೆ
ನನ್ನನಲ್ಲೇ ಬಿಟ್ಟು.

ಕೆಲವೊಂದು ಸಲ ತಾಳ್ಮೆಗೆಟ್ಟು
ಬೇಡವಾದ ಬಸ್ಸನ್ನು ಏರಿ
ಬೆನ್ನಟ್ಟಿ-
ಯಾವುದೊ ಒಂದು ಸ್ಟಾಪಿನಲಿ
ನನ್ನ ಬಸ್ಸು ನಿಂತಿರುವುದನ್ನು ಕಂಡು
ಇಳಿದು ಹಿಡಿಯುವಷ್ಟರಲ್ಲಿ

ನಿರ್ದಯದಿಂದ ಚಲಿಸಿ ಬಿಟ್ಟಿರುತ್ತದೆ.
ನನಗೂ ಅದಕೂ
ಎಂದೂ ಹೊಂದಿ ಬಂದಿಲ್ಲ.

ಆದರೆ ನನ್ನ ಬಸ್ಸು
ಅದೇಕೆ ಇನ್ನೂ ಇದೆ ಎಂಬುದೇ
ನನಗಿನ್ನೂ ತಿಳಿದಿಲ್ಲ.

- ಪೂವಿಯರಸು

ಪರಿಹಾರ

‘ಏನು ಮಾಡುವುದು ಈ ಕೈಗಳನ್ನು’
ಎಂದೆ. ‘ಏನು ಮಾಡುವುದು ಎಂದರೆ’
ಸಾಮಿ ಸುಮ್ಮನಾದ.
ಕೈಗೆ ಕೆಲಸವೊಂದು ಇದ್ದರೆ ಪ್ರಶ್ನೆಯಿಲ್ಲ
ಉಳಿದ ಹೊತ್ತಿನಲ್ಲಿ, ನಡೆಯುವಾಗ
ನಿಲ್ಲುವಾಗ ಈ ಕೈಗಳು
ಹೆಗಲ ಜೋಕಾಲಿಗಳು. ಸಹಿಸಲಾರದ
ತೊಡಕು, ರೂಪಕ್ಕೆ ಕುಂದು’ ಎಂದೆ ನಾನು.
‘ಕೈಗಳನು ಕಾಲು ಮಾಡು’ ಎಂದ ಸಾಮಿ.

- ಸಿ. ಮಣಿ

ಮನುಷ್ಯ

ಜೀವನ ಹೋರಾಟದಲ್ಲಿ
ಗುರಿಗಳನ್ನು ಆಶೆಗಳನ್ನು ಎಲ್ಲ ಬಲಿಗೊಟ್ಟು
ಮೌಲ್ಯಗಳನ್ನು ಯಶಸ್ಸಿನ ಅಳತೆಗೋಲಿಂದ
ಲೆಕ್ಕ ಹಾಕುವ ರೂಢಿಯಾಗಿ
ಸಂಪತ್ತು, ಪದವಿ, ಪ್ರಭಾವ ಇವುಗಳ ಮುಂದೆ
ಸೊರಗಿ, ಸಣ್ಣಾಗಿ
ಸಾದಾ ರಣಜೀವನ ಬಾಳುವ
ಸರಾಸರಿ ಮನುಷ್ಯ ಇವನು.

- ಸಿ. ಮಣಿ

ಕಣ್ಣಿ

ಗಾಳಿಗೆ ಹಗ್ಗ ಹಾಕಿ
ಎಳ ತಂದು, ಗೂಟ ಬಡಿದು
ಗಂಟು ಹಾಕಿ ಕಟ್ಟಿದರು.

ಬಹಳ ಒಳ್ಳೇದು, ಬಾಧಕವಿಲ್ಲ.
ದಾರಿ ತಪ್ಪಿಹೋಗದು
ಸುತ್ತಿಕೊಂಡು ಬರಬಹುದು.
ಸ್ಥಿರವಾದ
ಸ್ವತಂತ್ರ ಜೀವನ ಎಂದರು.

ಗಾಳಿ ಮೈಮರೆತು, ತಲೆಯಾಡಿಸಿ
ಸರಿ ಎಂದಿತು.
ಕಣ್ಣಿ ವರ್ತುಲಾಕಾರ ತಿರುಗಿ
ವಾಸ್ತವ ಎಂದಿತು.

ಒಮ್ಮೆ ವರ್ತುಲ ದಾಟಿ
ಹೋಗಲು ಹವಣಿಸಿತು.
ನಡುವಣ ಗೂಟ ಅಲುಗಾಡಲಿಲ್ಲ-
ಏನು ಹೇಳುವರು ಕೆಲವರು ಎಂದಿತು.

ಕಣ್ಣಿಯೊ ಸುರುಟಿ ಜಗ್ಗಿ
ಮತ್ತಿಷ್ಟು ಬಿಗಿಯಿತು.


-ಸಿ. ಮಣಿ

ಕೋಣೆ - ಬಯಲು

ತಪ್ಪಿಸಿಕೊಂಡೆ ಎಂದು
ಕಣ್ಣು ಪಿಳುಕಿಸಿ ಸುತ್ತೆಲ್ಲ ನೋಡಿದೆ.
ಮೇಲೆ ಆಕಾಶ, ನಾಲ್ಕು ದಿಕ್ಕಿನಲು
ಭೂಮಿಯ ನೆರಳು
ಮಾಡ, ಗೋಡೆಗಳೊಂದೂ ಇಲ್ಲ.
ಎಲ್ಲ ದಿಕ್ಕಿನಲ್ಲು ಕಣ್ಣು ಕಂಡಿದ್ದು.

ಬಟ್ಟ ಬಯಲು ತಾನೆ, ಇದು ಕೋಣೆಯಲ್ಲ
ಎಂದು ಕೆಲಹೊತ್ತು
ಕುಣಿದಾಡಿತ್ತು ಮನಸು
ಪಶ್ಚಿಮಕ್ಕೆ ನಡೆದೆ : ಬಡಿಯಿತೊಂದು ಗೋಡೆ.
ದಕ್ಷಿಣಕ್ಕೆ ನಡೆದೆ : ಬಡಿಯಿತೊಂದು ಗೋಡೆ.
ಉತ್ತರಕ್ಕೆ ನಡೆದೆ : ಬಡಿಯಿತೊಂದು ಗೋಡೆ.
ಪೂರ್ವಕೆ ನಡೆದೆ ಬಡಿಯಿತೊಂದು ಗೋಡೆ.
ಎದ್ದು ನೆಗೆದೆ -
ತಲೆಗೆ ಬಡಿಯಿತು ಮಾಡ.

- ಸಿ. ಮಣಿ



ಚೆನ್ನವೀರ ಕಣವಿಯವರು ಕನ್ನಡದ ಹಿರಿಯಕವಿಗಳ ಶ್ರೇಣಿಯಲ್ಲಿ ಅಗ್ರಗಣ್ಯರು. ಹೊಸಗನ್ನಡದ ಕಾವ್ಯಕ್ಷೇತ್ರದಲ್ಲಿ ಅವರ ಹೆಸರು ಎಂದೆಂದಿಗೂ ಹಸಿರು. ಕಣವಿಯವರು ಒಟ್ಟು ೧೬ ಕವನ ಸಂಕಲನಗಳನ್ನು ಹೊರ ತಂದಿದ್ದಾರೆ. ವಿದ್ಯಾ ವಿನಯ ಸಂಪನ್ನರಾದ ಕಣವಿಯವರು ಸರಳ ಜೀವಿ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಗೂ ಕವಿಗಳಿಗೂ ಬಹಳ ಕಾಲದ ನಂಟು. ಇಂಥ ಮಧುರ ಬಾಂಧವ್ಯದ ನೆನಪಿನೊಂದಿಗೆ ಈ ಕಾವ್ಯ ಸಂಪುಟಗಳು ಪ್ರಕಟವಾಗುತ್ತಿವೆ.

ಬರೆದು ತೀರದ ಬದುಕಿನ ಸೆಲೆಯನ್ನು, ನಿಗೂಢತೆಯನ್ನು ತವಕ-ತಲ್ಲಣಗಳನ್ನು ಮೌಲ್ಯಮಾಪನ ಮಾಡಲು ಹೊರಟ ಫಲವೇ 'ಬರೆದು ತೀರದ ಬದುಕು' ಕೃತಿ. ಹದಿನಾಲ್ಕು ಸಂಕಲನಗಳಲ್ಲಿ ಶ್ರೀ ಕಣವಿಯವರು ವಿವಿಧ ಸಾಮಾಜಿಕ ಸಂದರ್ಭಗಳಿಗೆ, ವ್ಯಕ್ತಿಗಳಿಗೆ, ಬದುಕಿನ ವಿಸ್ಮಯಗಳಿಗೆ, ನಿಸರ್ಗದ ಕೊಡುಗೆಗಳಿಗೆ ಸ್ಪಂದಿಸಿದ್ದಾರೆ.

'ಬರೆದು ತೀರದ ಬದುಕು' ಕವಿಯ ಪಕ್ವತೆಯನ್ನು ತೋರುತ್ತದೆ. ಬದುಕೆಂಬುದು ಮುಗಿಯದ ಹೊತ್ತಗೆ, ಕೆಲವು ಪುಟಗಳು ಕಳಚಿದರೂ ಬಾಧಕವಿಲ್ಲ ಎಂಬ ಭಾವದ ಇಂಗಿತ 'ಕೊನೆಯ ನಿಲ್ದಾಣ'ದಂತಹ ಕವಿತೆಗಳಲ್ಲಿ ಹಿಂದೆ ಪ್ರಕಟವಾಗಿದ್ದರೆ ಇಲ್ಲಿ ಬದುಕು ಪ್ರತ್ಯಕ್ಷವಾಗುವ ರೀತಿ ಪ್ರೌಢವಾದುದು. ಕವಿ, ತಾತ್ವಿಕ ನೆಲೆಗಟ್ಟಿನಿಂದ ಅದನ್ನು ಪರಿಭಾವಿಸಿ ತೂಗುತ್ತಿದ್ದಾರೆ. ಇಲ್ಲಿಯ ಐವತ್ತಾರು ಕವನಗಳಲ್ಲಿ ಸುನೀತ, ಹನಿಗವನ ಹಾಗೂ ಅನುವಾದಿತ ಕವನಗಳೂ ಇವೆ. ವ್ಯಕ್ತಿ ಚಿತ್ರಗಳಂತೂ ಸಾನೆಟ್ಟಿನ ಚೌಕಟ್ಟಿನಲ್ಲಿ ಉಜ್ವಲವಾಗಿ ಹೊಳೆಯುತ್ತವೆ.

–ಡಾ. ಕಮಲಾ ಹೆಮ್ಮಿಗೆ

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
9, ರಮ್ಯ, ಗೋಕುಲಂ 3ನೇ ಹಂತ, ಮೈಸೂರು-2